ಹಿರೋಶಿಮಾದ ಮಕ್ಕಳು







ಭಾರತ ಜ್ಞಾನ ವಿಜ್ಞಾನ ಸಮಿತಿ

Hiroshimada makkalu a book written by Mr.P.K.Abdul Lathif on behalf of Bharat Gyan Vigyan Samithi, Karnataka.

First edition: September 2001

Copies: 5000

Pages: 24+4

Rate: 6.00

Published by:

aka

ಹಿರೋಶಿಮಾದ ಮಕ್ಕಳು

ಪಿ.ಕೆ.ಅಬ್ದುಲ್ ಲತೀಫ್



ಪ್ರಕಟಣೆ
ಭಾರತ ಜ್ಞಾನ ವಿಜ್ಞಾನ ಸಮಿತಿ
ಭಾರತೀಯ ವಿಜ್ಞಾನ ಮಂದಿರದ ಆವರಣ
ಬೆಂಗಳೂರು-12

ಮುನ್ನುಡಿ

ಗೆಳೆಯರೆ,

ಭಾರತ ಜ್ಞಾನ ವಿಜ್ಞಾನ ಸಮಿತಿ ಈ ವರ್ಷ ಜ್ಞಾನ ವಿಜ್ಞಾನ ಓದುಗರ ಬಳಗ ಎಂಬ ಯೋಜನೆಯಡಿಯಲ್ಲಿ, ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳಿಗಾಗಿ ಪವಾಡಗಳು, ನಮ್ಮ ಚಂದ್ರ, ಹಾಡಿ ನಲಿಯೋಣ, ಹಿರೋಷಿಮಾದ ಮಕ್ಕಳು ಹಾಗೂ ನಮ್ಮ ಆರೋಗ್ಯ ಎಂಬ ಐದು ಪುಸ್ತಕಗಳನ್ನು ಹೊರತರುತ್ತಿದೆ. ಉತ್ತಮವಾದ ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ದೊರಕಿಸಿಕೊಡುವ ಉದ್ದೇಶದಿಂದ ಈ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಈ ಪುಸ್ತಕಗಳು ನಿಮಗೆ ಇಷ್ಟವಾಗುತ್ತವೆಂದು ನಂಬಿದ್ದೇವೆ. ಈ ಪುಸ್ತಕಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆದು ಕಳಿಸಿ. ಅದು ಮುಂದೆ ನಿಮಗಾಗಿ ನಾವು ತರಲಿರುವ ಪುಸ್ತಕಗಳನ್ನು ಇನ್ನೂ ಉತ್ತಮಪಡಿಸಲು ಸಹಾಯವಾಗುತ್ತದೆ.

ಹಿರೋಶಿಮಾದ ಮಕ್ಕಳು ಪುಸ್ತಕ ಎರಡನೇ ಮಹಾಯುದ್ಧದಲ್ಲಿ ಅಮೇರಿಕ ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ಪಟ್ಟಣಗಳ ಮೇಲೆ ಹಾಕಿದ ಪರಮಾಣು ಬಾಂಬುಗಳ ಭೀಕರ ಪರಿಣಾಮಗಳನ್ನು ವಿವರಿಸುತ್ತದೆ. ಜಗತ್ತಿನಾದ್ಯಂತ ಯುದ್ಧದ ಕಾರ್ಮೋಡಗಳು ಕವಿದಿರುವ ಈ ಸಂದರ್ಭದಲ್ಲಿ ಈ ಪುಸ್ತಕ ಹೆಚ್ಚಿನ ಅರ್ಥ ಪಡೆಯುತ್ತದೆ.

ಪುಸ್ತಕವನ್ನು ರಚಿಸಿಕೊಟ್ಟ ಗೆಳೆಯ ಶ್ರೀ ಪಿ.ಕೆ.ಅಬ್ದುಲ್ ಲತೀಫ್ ಅವರಿಗೆ, ಅಂದವಾದ ಮುಖಪುಟ ರಚಿಸಿಕೊಟ್ಟ ಶ್ರೀ ಗುಜ್ಜಾರಪ್ಪನವರಿಗೆ, ಡಿ.ಟಿ.ಪಿ ಮಾಡಿದ ಬಿಜಿವಿಎಸ್ ರಾಜ್ಯ ಕಛೇರಿಯ ಕುಮಾರಿ ಸಿ.ಹೇಮಾವತಿಯವರಿಗೆ, ಒಳ ಪುಟ ವಿನ್ಯಾಸ ಮಾಡಿದ ಗೆಳೆಯ ಶ್ರೀ ರಾಜಶೇಖರ್‌ರವರಿಗೆ, ಪುಸ್ತಕವನ್ನು ಹೊರತರಲು ಶ್ರಮಿಸಿದ ಶ್ರೀಎಫ್.ಸಿ.ಚೇಗರೆಡ್ಡಿ ಅವರಿಗೆ ಹಾಗೂ ಕಡಿಮೆ ಸಮಯದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಅಕ್ಷರವಿನ್ಯಾಸದ ಗೆಳೆಯ ಚಂದ್ರು ಇವರುಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಯೋಜನೆ ಪ್ರಾರಂಭಿಸಿದಾಗ ಪ್ರಕಟಣಾಪೂರ್ವ ಕೂಪನ್ ಗಳನ್ನು ಮಾರಾಟ ಮಾಡಿ ಪುಸ್ತಕ ಪ್ರಕಟಣೆಯ ಸಾಹಸಕ್ಕಿಳಿಯಲು ನೆರವಾದ ನೂರಾರು ಗೆಳೆಯರಿಗೆ ನಮ್ಮ ವಿಶೇಷ ನಮನಗಳು. ಈ ಪುಸ್ತಕ ಕರ್ನಾಟಕದ ಮನೆ ಮನೆಗೆ ತಲುಪಿ ಮಕ್ಕಳಲ್ಲಿ ಹಾಗೂ ನವ ಸಾಕ್ಷರರಲ್ಲಿ ಓದುವ ಹವ್ಯಾಸ ಬೆಳೆಸಲಿ ಎಂದು ಹಾರೈಸುತ್ತೇವೆ.

ಕಾರ್ಯದರ್ಶಿ

ಭಾರತ ಜ್ಞಾನ ವಿಜ್ಞಾನ ಸಮಿತಿ

ಸಮಾಜ ವಿಜ್ಞಾನ ಪಾಠದ ಶಿಕ್ಷಕರು ತರಗತಿಯ ಒಳಗೆ ಬಂದರು. ಮಕ್ಕಳ ಮುಖಗಳಲ್ಲಿ ಏನೋ ಕಾತರ ತುಂಬಿದಂತಿತ್ತು.



ಶಿಕ್ಷಕರು "ಯಾಕ್ರೋ ಇವತ್ತು ಬಹಳ ಉತ್ಸಾಹದಿಂದಿದ್ದೀರಲ್ಲ? ಏನು ಕಥೆ.....?" ಎಂದು ಶಿಕ್ಷಕ ಕೇಳುತ್ತಿದ್ದಂತೆ ತರಗತಿಯ ಮಾತುಗಾರ ಯಶ್ವಂತ "ಸಾರ್ ನಿನ್ನೆ ಪಾಠದಲ್ಲಿ ನೀವೇಳಿದ್ರಲ್ಲಾ...... ವಿಶ್ವ ಮಹಾಯುದ್ಧ ಮತ್ತು ಬ್ರಾಂಬ್...... ಅದೇ ತರದ ಯುದ್ಧ ಈಗ ಆಗುತ್ತದಂತೆ. ಅಮೇರಿಕಾ ದೇಶದ ದೊಡ್ಡ ಕಟ್ಟಡಗಳಿಗೆ ಯಾರೋ ಬಾಂಬ್ ಇರುವ ವಿಮಾನಗಳನ್ನು ಗುದ್ದಿಸಿದರಂತೆ........"

"ಆ ಕಟ್ಟಡಗಳು ಪುಡಿ ಪುಡಿಯಾಗಿ ಬೀಳುವುದು ಟಿ.ವಿ ಯಲ್ಲಿ ತೋರಿಸುತ್ತಿದ್ದರು. 111 ಮಹಡಿಗಳ ಆ ಕಟ್ಟಡಗಳಲ್ಲಿ 50 ಸಾವಿರ ಜನ ಕೆಲಸ ಮಾಡುತ್ತಿದ್ದರಂತೆ........" ಎಂದು ದಿನೇಶ ಸೇರಿಸುವಷ್ಟರಲ್ಲಿ ವಿನುತ "ಅಮೇರಿಕ ಸಾವಿರಾರು ಬಾಂಬುಗಳನ್ನು ಇಟ್ಕೊಂಡಿರುವ ಬಲಿಷ್ಠ ರಾಷ್ಟ್ರವಂತೆ, ಅವರು ಈ ಕೆಲಸ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳಲು ಯುದ್ಧ ಮಾಡ್ತಾರಂತೆ, ಅದು ಮೂರನೇ ವಿಶ್ವಯುದ್ಧವಾಗುತ್ತದಂತೆ. ವಿಶ್ವ ಯುದ್ಧ ಆದರೆ...... ನಮ್ಮ ದೇಶವೂ ಸೇರಬೇಕಾಗುತ್ತದಲ್ವಾ ಸಾರ್........ ಆಗ ನಾವೂ .... ನಮ್ಮೂರು ಎಲ್ಲಾ........ !" ಎಂದು ಹೇಳುತ್ತಿದ್ದಾಗ ಎಲ್ಲರ ಮುಖಗಳಲ್ಲಿ ಭಯದ ನೆರಳು ಆವರಿಸಿತು. ತರಗತಿಯನ್ನು ಮೌನ ಆವರಿಸಿತು. ಕೆಲವು ನಿಮಿಷಗಳ ಮೌನದ ಕೊನೆಯಲ್ಲಿ ಯಶ್ವಂತ "ಅದಿರಲಿ ಸಾರ್ ನಿನ್ನೆ

ದಿನ ಆ ಎರಡನೇ ವಿಶ್ವ ಯುದ್ಧದ ಹೀರೋಗಳಾದ ಹಿರೋಶಿಮಾದ "ಪುಟ್ಟ" ಮತ್ತು ನಾಗಸಾಕಿಯ "ಡೊಳ್ಳ"ನ ಕಥೆ ಹೇಳುತ್ತೇನೆ ಎಂದಿರಲ್ಲಾ" ಎಂದು ಹಿಂದಿನ ದಿನ ಪಾಠ ಮುಗಿಸಿ ಹೋಗುವಾಗ ಕೊಟ್ಟಿದ್ದ ಮಾತನ್ನು ನೆನಪಿಸಿದ.

ಅಲ್ಲಿಯವರೆಗೂ ಮಕ್ಕಳೇ ಮಾತನಾಡುತ್ತಿದ್ದರು, "ಓ ಹೌದಲ್ಲ, ನಿನ್ನೆ ದಿನ ಪುಟ್ಟ ಮತ್ತು ಡೊಳ್ಳನ ಕಥೆ ಹೇಳುತ್ತೇನೆಂದಿದ್ದೆ. ಕಾಕತಾಳೀಯವಾಗಿ ಈ ದಿನ ಅಂತಹ ಸುದ್ದಿಗಳು ಪತ್ರಿಕೆ, ರೇಡಿಯೋ, ಟಿ.ವಿ ಮತ್ತು ಜನರ ಬಾಯಲ್ಲಿ ಕೇಳಿಸುತ್ತಿದೆ. ಈ ಸಂಘರ್ಷ ಜಗತ್ತನ್ನೆಲ್ಲಾ ಹೇಗೆ ಆವರಿಸುತ್ತದೋ ಕಾದು ನೋಡುವಾ. ನೇರವಾಗಿ ಕಾದಾಟದಲ್ಲಿ ಭಾಗವಹಿಸದೆ ಇದ್ದರೂ, ನಮ್ಮೆಲ್ಲ ಜನರ ಕಷ್ಟ ಹೆಚ್ಚುವುದರಲ್ಲಿ ಸಂಶಯವಿಲ್ಲ. ಹಿಂದೆಯೂ ಹೀಗೇ ಆಗಿತ್ತು.

1914 ರಿಂದ 1918 ರವರೆಗೆ ನಡೆದ ಮೊದಲನೆ ಮಹಾ ಯುದ್ಧ ಯುರೋಪ್ ಖಂಡದ ಒಟ್ಟು ಭೂಭಾಗವನ್ನು ಆಕ್ರಮಿಸಿಕೊಂಡಿತ್ತು. ಪ್ರಪಂಚದ ರಾಷ್ಟ್ರಗಳು ಎರಡು ಬಣಗಳಾಗಿ ಪರಸ್ಪರ ಕಾದಾಡಿದವು. ವಿಜ್ಞಾನದ ಬೆಳವಣಿಗೆಯಿಂದ ಉತ್ಪಾದನೆಯು ಹೆಚ್ಚಿತ್ತು. ಇವುಗಳ ಮಾರಾಟ ಮತ್ತು ಮಾರುಕಟ್ಟೆ ತೆರಿಗೆಗಳ ಕುರಿತು ಯುರೋಪಿನ ದೇಶಗಳಲ್ಲಿ ಪರಸ್ಪರ ವೈಮನಸ್ಸು ಆಗಾಗ ಉಂಟಾಗುತ್ತಿತ್ತು. ಇದರೊಂದಿಗೆ ಆಯಾ ದೇಶಗಳ ಜನರಲ್ಲಿದ್ದ ರಾಷ್ಟ್ರೀಯ ದುರಭಿಮಾನ ತಾವು ಮೇಲು, ತಾವು ಉತ್ತಮರು ಎಂಬ ನಂಬಿಕೆಗಳು ಯುದ್ಧಕ್ಕೆ ಕಾರಣವಾದವು. ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ಅಂದಿನವರೆಗೆ ಇರದಿದ್ದ ಆಯುಧಗಳನ್ನು ಈ ಯುದ್ಧದಲ್ಲಿ ಭಾಗವಹಿಸಿದ ದೇಶಗಳು ಹೊಂದಿದ್ದವು. ಈ ಆಯುಧಗಳ ಸ್ಪರ್ಧೆಯೇ ಯುದ್ಧವನ್ನು ಮಾರಕವಾಗಿ ಮಾಡಿತ್ತು.

ಆಧುನಿಕ ರೂಪ ಪಡೆದಿದ್ದ ಯುದ್ಧಾಸ್ತ್ರಗಳಿಂದ ಸಾವಿನ ಸಂಖ್ಯೆ ಹೆಚ್ಚಿತು. ಗ್ರೆನೇಡುಗಳು, ಒಂದೇ ಸಮನೆ ಗುಂಡಿನ ಮಳೆಗರೆಯುವ ಮೆಷಿನ್‌ಗನ್‌ಗಳು ಬಳಕೆಯಾದವು. ಕಣಿವೆ, ಕಂದಕಗಳಲ್ಲಿ ಅವಿತು ಗುಂಡು ಹಾರಿಸುವ, ಆಕಾಶದಲ್ಲಿ ಹಾರಾಡುತ್ತಲೇ ಶತ್ರುಗಳ

ಮೇಲೆರಗುವ ವಿಮಾನಗಳು, ತಯಾರಾಗಿದ್ದವು. ಸಮುದ್ರದಲ್ಲಿ ಜಲಾಂತರ್ಗಾಮಿಗಳನ್ನು (ಸಬ್‌ಮೆರಿನ್) ಬಳಸಲಾಯಿತು. ಬ್ರಿಟಿಷರು ಕಂಡುಹಿಡಿದಿದ್ದ ಟ್ಯಾಂಕನ್ನು ಮೊದಲಬಾರಿಗೆ ಬಳಸಲಾಯಿತು. ವಿಷಾನಿಲವೂ ಆಯುಧವಾಗಿತ್ತು. ಸಾಸಿವೆ ಅನಿಲ (ವಾಸನೆಯಲ್ಲಿ ಸಾಸಿವೆ ಎಣ್ಣೆಯಂತಿದ್ದುದರಿಂದ) ವೆಂಬ ವಿಷಾನಿಲದ ಬಳಕೆಯಿಂದ ಒಂದು ಲಕ್ಷ ಜನ ಅಸುನೀಗಿದ್ದರು. ಈ ಯುದ್ಧದಲ್ಲಿ ಒಟ್ಟು 13 ಮಿಲಿಯನ್(ಒಂದು ಮಿಲಿಯನ್=10 ಲಕ್ಷ) ಜನ ಸತ್ತಿದ್ದರು. 25 ಲಕ್ಷ ಜನ ಗಾಯಗೊಂಡು ಅಂಗವಿಕಲರಾಗಿದ್ದರು. ಕೊನೆಯಲ್ಲಿ ಜರ್ಮನಿ ಸೋತು ಯುದ್ಧ ನಿಂತಿತು. ಲೀಗ್ ಅಫ್ ನೇಷನ್ಸ್ ಎಂಬ ಅಂತರಾಷ್ಟ್ರೀಯ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದಿತು.

ಎರಡನೇ ಮಹಾಯುದ್ಧದಲ್ಲಿ ಹಿಂದಿನದಕ್ಕಿಂತಲೂ ಹೆಚ್ಚು ದೇಶಗಳು ಸೇರಿದ್ದವು. ನಮ್ಮ ದೇಶದ ಜನರೂ ಸೈನಿಕರಾಗಿ ಈ ಯುದ್ಧದಲ್ಲಿ ಭಾಗವಹಿಸಿದ್ದರು.

"ನಮ್ಮ ದೇಶವನ್ನು ಆಗ ಬ್ರಿಟಿಷರು ಆಳುತ್ತಿದ್ದರಲ್ಲವೇ?" ದಿನೇಶ ಕೇಳಿದ.

"ಹೌದು........ ನಮ್ಮ ದೇಶವನ್ನಾಳುತ್ತಿದ್ದ ಬ್ರಿಟಿಷರು ಜರ್ಮನಿಯ ವಿರೋಧಿ ಗುಂಪಿನಲ್ಲಿದ್ದರು. ಆ ದಿನಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯ ಪ್ರಪಂಚದ ಎಲ್ಲ ಖಂಡಗಳಲ್ಲೂ ಹರಡಿತ್ತು. ಬ್ರಿಟಿಷ್ ಸರಕಾರ ತನ್ನ ಆಡಳಿತವಿದ್ದ ಎಲ್ಲ ದೇಶಗಳ ಸೈನಿಕರನ್ನೂ ಇದರಲ್ಲಿ ಭಾಗವಹಿಸುವಂತೆ ಮಾಡಿತು.

"ಎರಡನೇ ಮಹಾಯುದ್ಧಕ್ಕೂ ಜರ್ಮನಿಯ ಹಿಟ್ಲರ್‌ನೇ ಕಾರಣನೆಂದು ಹೇಳಿದಿರಲ್ಲಾ" ವಿನುತಾ ಕೇಳಿದಳು.

"ಹೌದು .... ಮೊದಲ ಮಹಾ ಯುದ್ದದಲ್ಲಿ ಸೋತು ಹಿಂಜರಿದಿದ್ದ ಜರ್ಮನಿಯ ಅನುಭವದಿಂದ ಹಿಟ್ಲರ್ ಪಾಠ ಕಲಿತಿರಲಿಲ್ಲ. ಒಂದಲ್ಲ ಒಂದು ದಿನ ಜಗತ್ತಿನ ಮೇಲೆ ತನ್ನ ಹಿಡಿತ ಸಾಧಿಸುವ ಕನಸು ಕಂಡಿದ್ದ. ಇದಕ್ಕಾಗಿ ದೇಶದ ಜನರನ್ನು, ಸರಕಾರವನ್ನು ತನ್ನ ಸಂಪೂರ್ಣ ಹಿಡಿತದಲ್ಲಿಟ್ಟಿದ್ದ. ಕ್ರೂರ ಸರ್ವಾಧಿಕಾರಿಯಾದ.




ಹೊಸ ಹೊಸ ಆಯುಧಗಳನ್ನು ತಯಾರಿಸುವಂತೆ ವಿಜ್ಞಾನಿಗಳನ್ನು ಒತ್ತಾಯಿಸಿದ. ಒತ್ತಾಯ ಸಹಿಸದ ಅನೇಕ ವಿಜ್ಞಾನಿಗಳು ದೇಶ ಬಿಟ್ಟು ಓಡಿ ಹೋದರು. ಇವನ ಜನಾಂಗೀಯ ದ್ವೇಶದ ಕ್ರೂರತನದ ಕಥೆಗಳು ಸಾಕಷ್ಟಿವೆ. ಅದನ್ನು ಇನ್ನೊಂದು ದಿನ ಹೇಳುವೆ.

ಹಿಟ್ಲರ್ 1939ರಲ್ಲಿ ಪಕ್ಕದ ಪೋಲೆಂಡನ್ನು ಆಕ್ರಮಿಸಿ ವಶಪಡಿಸಿಕೊಂಡ. ಇದು ತಪ್ಪು, ನೀನು ಅಲ್ಲಿಂದ ಸೈನ್ಯವನ್ನು ಹಿಂತೆಗೆಯಬೇಕೆಂದು ಅದರ ಪಕ್ಕದ ಫ್ರಾನ್ಸ್ ಮತ್ತು ಬ್ರಿಟನ್ ಹಿಟ್ಲರ್‌ನನ್ನು ಒತ್ತಾಯಿಸಿದವು. ಮಾತುಕತೆಗೆ ಬಗ್ಗದಿದ್ದಾಗ ಹಿಟ್ಲರನ ಮೇಲೆ ಯುದ್ಧ ಸಾರಿದವು. ಆದರೆ ಹಿಟ್ಲರ್ ಯುದ್ಧ ಮಾಡುತ್ತಲೇ ಇದ್ದ. ಪಕ್ಕದ ಡೆನ್ಮಾರ್ಕ್, ನಾರ್ವೆ; ಹಾಲೆಂಡ್, ಬೆಲ್ಜಿಯಂ ಮತ್ತು ಫ್ರಾನ್ಸ್ ದೇಶಗಳನ್ನು ಗೆದ್ದುಕೊಂಡ. ಮುಂದೆ ರಷ್ಯಾ ಮತ್ತು ಬ್ರಿಟನ್‌ಗಳ ಕಡೆಗಳಿಗೆ ನುಗ್ಗಿದ. ಯುದ್ಧ ಪ್ರಾರಂಭವಾಗಿ 2 ವರ್ಷಗಳ ನಂತರ ಅಮೇರಿಕ ಬ್ರಿಟನ್‌ನ ಜೊತೆ ಸೇರಿಕೊಂಡಿತು. ಅಲ್ಲಿಯವರೆಗೂ ಅದು ಯುದ್ಧ ಸಾಮಗ್ರಿಗಳನ್ನು ಮಾರುತ್ತ ಲಾಭ ಪಡೆದಿತ್ತು. ಈ ಆಯುಧ ಮತ್ತು ವಿಮಾನ ವ್ಯಾಪಾರದ ಮೇಲೆ ಜರ್ಮನಿಯ ಕಡೆಯುವರು ಕಣ್ಣಿಟ್ಟರು. ಜರ್ಮನಿಯ ಪಕ್ಷದಲ್ಲಿ ನಿಂತು ಯುದ್ಧ ಮಾಡುತ್ತಿದ್ದ ಜಪಾನ್ 1941ರಲ್ಲಿ 'ಪರ್ಲ್ ಹಾರ್ಬರ್' ಎಂಬ ಬಂದರಿನ ಮೇಲೆ ಬಾಂಬನ್ನೆಸೆಯಿತು. ಇಲ್ಲಿ ಅಮೇರಿಕಾಕ್ಕೆ ಅಪಾರ ನಷ್ಟವುಂಟಾಗಿತ್ತು. ಈ ಘಟನೆಯಿಂದ ಕೆರಳಿದ ಅಮೇರಿಕ ಯುದ್ಧಕ್ಕಿಳಿಯಿತು. ಹೀಗೆ ಯುದ್ಧ ಪ್ರವೇಶಿಸಿದ ಅಮೇರಿಕ, ಯುದ್ಧ ಕೊನೆಯಾಗುವುದರೊಳಗೆ ಪ್ರಮುಖ ದೇಶವೆನ್ನಿಸಿತು. ತಾನೇ ಪ್ರಪಂಚಕ್ಕೆಲ್ಲಾ ಬಲಿಷ್ಠ ರಾಷ್ಟ್ರ ಎಂದು ತೋರಿಸಿಕೊಡಲು ಈ ಸಂದರ್ಭ

ಬಳಸಿಕೊಂಡಿತು. ಇದಕ್ಕೆ ಮಾಡಿದ ಪ್ರಯತ್ನದ ಕಥೆಯೇ ಹಿರೋಶಿಮಾದ "ಪುಟ್ಟ" ಹಾಗೂ "ಡೊಳ್ಳ"ರ ಕಥೆ.

ನಾನು ಮೊದಲೇ ಹೇಳಿದಂತೆ, ಮೊದಲ ಮಹಾಯುದ್ಧದ ನಂತರ ಹಿಟ್ಲರ್ ತನ್ನ ಆಯುಧಗಳನ್ನು ಇನ್ನೂ ಆಧುನಿಕಗೊಳಿಸಲು ತೀರ್ಮಾನಿಸಿದ್ದ. ಇದಕ್ಕಾಗಿ ವಿಜ್ಞಾನಿಗಳ ಮೇಲೆ ಒತ್ತಾಯ ಹೇರಿದ್ದ. ಹಲವು ವಿಜ್ಞಾನಿಗಳು ದೇಶ ಬಿಟ್ಟು ಹೋಗಿದ್ದರಲ್ಲವೇ? ಭೌತ ವಿಜ್ಞಾನಿಗಳಾಗಿದ್ದ ಲಿಯೋ ಸ್ಜಿಲಾರ್ಡ್ ಮತ್ತು ಆಲ್ಬರ್ಟ್ ಐನ್‌ಸ್ಟೀನ್ ಎಂಬುವರು ಇವರಲ್ಲಿ ಪ್ರಮುಖರು.



ಐನ್‌ಸ್ಟೀನರು, ಯಾವುದೇ ಒಂದು ಭೌತ ವಸ್ತುವನ್ನು ಶಕ್ತಿಯಾಗಿಯೂ, ಶಕ್ತಿಯನ್ನು ಭೌತವಸ್ತುವಾಗಿಯೂ ಪರಿವರ್ತಿಸಬಹುದೆಂದು ಕಂಡುಹಿಡಿದಿದ್ದರು. ಬೆಳಕು ಅತ್ಯಂತ ವೇಗವಾಗಿ ಚಲಿಸುವ ಕಾರಣ, ಆ ವೇಗದಲ್ಲಿ ನಿರ್ಧಿಷ್ಟ ಪ್ರಮಾಣದ ವಸ್ತುವನ್ನು ನಾಶಪಡಿಸಿದರೆ ಅಗಾಧವಾದ ಶಕ್ತಿ ಬಿಡುಗಡೆಯಾಗುತ್ತದೆ. ಈ ಶಕ್ತಿಯನ್ನು ಹಿಡಿತದಲ್ಲಿಟ್ಟುಕೊಂಡು ಬಳಸಿದರೆ ವಿದ್ಯುತ್ ತಯಾರಿಕೆ ಮತ್ತು ಕೈಗಾರಿಕಾ ಇಂಧನಗಳಾಗಿ ಬಳಕೆ ಮಾಡಬಹುದು. ಇಲ್ಲದಿದ್ದರೆ ಸರ್ವನಾಶ ಮಾಡಬಹುದಾದ ಬಾಂಬನ್ನೂ ತಯಾರು ಮಾಡಬಹುದೆಂದು ನಿರೂಪಿಸಿದ್ದರು.

ಈ ತತ್ವವನ್ನು ನಿರೂಪಿಸಿದ್ದ ಐನ್‌ಸ್ಟೀನರು ಹಿಟ್ಲರನ ದುರಾಸೆಯ ಅರಿವುಳ್ಳವರಾಗಿದ್ದರು. ಹಿಟ್ಲರನ ಕೈಗೆ ಇಂತಹ ಬಾಂಬ್ ಸಿಗುವುದಾದರೆ, ಅದನ್ನು ಬಳಸಿ ಅವನು ಪ್ರಪಂಚದ ಸರ್ವನಾಶಕ್ಕೆ ಕಾರಣನಾಗುತ್ತಾನೆಂದು ಮನಗಂಡರು. ಇದರಿಂದಾಗಿ ದೇಶ ಬಿಟ್ಟು ಹೋಗಿ ಅಮೇರಿಕವನ್ನು ಸೇರಿಕೊಂಡರು. ಅಮೇರಿಕಾದ ಅಧ್ಯಕ್ಷರಾಗಿದ್ದ 'ರೂಸ್‌ವೆಲ್ಟರಿಗೆ' ಈ ಅಪಾಯವನ್ನು ತಿಳಿಸಿದರು. ಐನ್‌ಸ್ಟೀನರ

ಮಾತುಗಳಿಂದ ಪ್ರೇರಿತರಾದ ರೂಸ್‌ವೆಲ್ಟ್ ತನ್ನ ದೇಶದ ಭೌತ ವಿಜ್ಞಾನಿಗಳೊಂದಿಗೆ ಚರ್ಚಿಸಿ 'ಮ್ಯಾನ್‌ಹ್ಯಾಟನ್' ಎಂಬ ಯೋಜನೆಯನ್ನು ರೂಪಿಸಿದರು. ಈ ಯೋಜನೆಯ ಪ್ರಕಾರ ವಸ್ತುವಿನ ಅಣು ವಿದಳನ (Nuclear fission) ಮೂಲಕ ಅಪಾರ ಶಕ್ತಿ ಬಿಡುಗಡೆಗೊಳಿಸುವ ಬಾಂಬನ್ನು ತಯಾರಿಸಲು ಆಜ್ಞೆಯಿತ್ತರು. ಅಪಾರ ಹಣಕಾಸನ್ನೂ ಇದಕ್ಕೊದಗಿಸಿದರು. ಜೆ. ರಾಬರ್ಟ್ ಓಪನ್ ಹೀಮರ್ ಎಂಬ ವಿಜ್ಞಾನಿಯ ನಾಯಕತ್ವದಲ್ಲಿದ್ದ ಭೌತ ವಿಜ್ಞಾನಿಗಳ ತಂಡ ಈಗಾಗಲೇ ತಾವು ಕಂಡು ಹಿಡಿದಿದ್ದ ತತ್ವಗಳ ಆಧಾರದಲ್ಲಿ ಅಣು ವಿದಳನ ಬಾಂಬನ್ನು ತಯಾರಿಸಿದರು. ಇದನ್ನು ಮೆಕ್ಸಿಕೋದ ಮರುಭೂಮಿಯಲ್ಲಿ 1945 ಜುಲೈ 17 ರಂದು ಪರೀಕ್ಷಿಸಿದರು. ಪರೀಕ್ಷೆ ನಡೆಯುವವರೆಗೂ ಈ ಕುರಿತು ಯಾರಿಗೂ ತಿಳಿದಿರಲಿಲ್ಲ. ಗುಟ್ಟಾಗಿಟ್ಟಿದ್ದರು.

ರೂಸ್‌ವೆಲ್ಟರು ತಮ್ಮ ಯೋಜನೆ ಪರೀಕ್ಷೆಗೊಳಪಡಿಸಿ ಫಲಿತಾಂಶ ಕಾಣುವುದರೊಳಗೆ ತೀರಿಕೊಂಡಿದ್ದರು. ಅನಂತರ ಹ್ಯಾರಿಟ್ರೂಮನ್ ಅವರು ಅಧಿಕಾರಕ್ಕೆ ಬಂದರು. ಈ ಸಂಶೋಧನೆಯ ಫಲವನ್ನು ಬಳಸಿ ತಾನು ಜಗತ್ತಿನ ಬಲಿಷ್ಠನೆಂದು ತೋರಿಸಿ ಕೊಳ್ಳಬೇಕೆಂಬ ಅಭಿಲಾಶೆ ಉಳ್ಳವರಾಗಿದ್ದರು. ಅದಕ್ಕಾಗಿ ಬಾಂಬನ್ನು


ಪರಮಾಣು ಬಾಂಬು ತಯಾರಿಸಲು ನಿರಾಕರಿಸಿದ ವಿಜ್ಞಾನಿ : ಲೀಸ್ ಮೇಟ್ನರ್ (1878-1968)

1878ರಲ್ಲಿ ಹುಟ್ಟಿದ ಲೀಸ್ ಮೇಟ್ನರ್ ಮೇಧಾವಿ ಭೌತಶಾಸ್ತ್ರಜ್ಞೆ ಪ್ರೊಟಾಕ್ಟ್ರಿನಿಯಂ ಮೂಲಧಾತುವನ್ನು ಕಂಡುಹಿಡಿದ ಈಕೆ ವಿಜ್ಞಾನಿ ಓಟೋಹಾನ್ ಒಡಗೂಡಿ ಯುರೇನಿಯಂ ವಿಭಜನೆಯನ್ನೂ ಕಂಡುಹಿಡಿದರು. ಆದರೆ 1944ರಲ್ಲಿ ಈಕೆಯ ಜೊತೆ ಕೆಲಸ ಮಾಡಿದ ಓಟೋಹಾನ್‌ಗೆ ನೊಬೆಲ್ ಪಾರಿತೋಷಿಕ ದೊರೆಯಿತು. ಸರಿಸಮಾನವಾಗಿ ದುಡಿದ ಲೀಸ್ ಮೇಟ್ನರ್ ರ ಹೆಸರೇ ಇರಲಿಲ್ಲ. ಪರಮಾಣು ವಿಭಜನೆಯಲ್ಲಿ ಮೊತ್ತಮೊದಲಿಗರಾದರೂ ಈ ವಿಜ್ಞಾನಿ ಅಣುಬಾಂಬ್ ತಯಾರಿಸಲು ನಿರಾಕರಿಸಿದರು. ಇಂಗ್ಲೆಂಡಿಗೆ ಹಿಂದಿರುಗಿದ ಈಕೆ 1968ರಲ್ಲಿ ಮೃತರಾದರು.



ಎಲ್ಲಾವರೂ ಪ್ರಯೋಗಿಸಿ, ಅದರಿಂದಾಗುವ ಪರಿಣಾಮವನ್ನು ಜಗತ್ತಿಗೆ ತೋರಿಸಿಕೊಡಲು ತೀರ್ಮಾನಿಸಿದರು. ಪರಿಣಾಮವಾಗಿ ಜಗತ್ತು ತನಗೆ ಹೆದರಿ, ತಗ್ಗಿ ಬಗ್ಗಿ, ನಡೆಯುವಂತೆ ಮಾಡುವ ವಿಕೃತ ಆಸೆ ಇವರದಾಗಿತ್ತು.

ಈ ದುರಾಸೆಯ ಮೊದಲ ಕೂಸೇ ಹಿರೋಶಿಮಾದ ಪುಟ್ಟ (Little boy). ಹಿರೋಶಿಮಾ ಜಪಾನ್ ದೇಶದ ಒಂದು ನಗರ. ಇಲ್ಲಿ 3.5 ಲಕ್ಷ ಜನ ವಾಸಿಸುತ್ತಿದ್ದರು. ಜಪಾನ್ ದೇಶ ಜರ್ಮನಿಯ



ಪರವಹಿಸಿ ಯುದ್ಧದಲ್ಲಿ ಭಾಗವಹಿಸಿತ್ತಲ್ಲವೇ. ಅಮೇರಿಕವನ್ನು ಕೆಣಕಿ ಯುದ್ಧಕ್ಕಿಳಿಯುವಂತೆ ಮಾಡಿತ್ತಲ್ಲವೇ. ಹೀಗಾಗಿ ಅಮೇರಿಕಾಗೆ ಜಪಾನಿನ ಮೇಲೆ ತೀಕ್ಷ್ಣ ಕಣ್ಣಿತ್ತು. ಇದು ಮಾತ್ರವಲ್ಲ, ತಮ್ಮಷ್ಟೇ ಕೈಗಾರಿಕಾ ರಂಗದಲ್ಲಿ ಮುನ್ನುಗ್ಗುತ್ತಿದ್ದ ಈ ದೇಶವನ್ನು ಈ ಹೆಸರಿನಲ್ಲಿ ಸದೆಬಡಿಯಬಹುದೆಂಬ, ಲೆಕ್ಕಾಚಾರ ಹಾಕಿತ್ತು. ಜರ್ಮನಿಯು ಈ ಹೊತ್ತಿಗೆ ಯುದ್ಧದಲ್ಲಿ ಸೋತು ಸುಣ್ಣವಾಗಿ ಶರಣಾಗಿತ್ತು. ಆದರೂ ಅಮೇರಿಕಾ ತಾನು ಈ ಯುದ್ಧಕ್ಕೆ ಮುಕ್ತಾಯ ಹಾಡುತ್ತೇನೆ ಎಂಬ ಹೆಸರಿನಲ್ಲಿ ಹಿರೋಶಿಮಾದ ಮೇಲೆ ನಿರ್ದಾಕ್ಷಿಣ್ಯವಾಗಿ ತನ್ನ ಪ್ರಯೋಗ ನಡೆಸಿತ್ತು.

1945 ಆಗಸ್ಟ್ 6ರ ಮುಂಜಾವು. 7.00 ಗಂಟೆ. ಹಿರೋಶಿಮಾದ ಆಕಾಶದಲ್ಲಿ ಮೂರು ವಿಮಾನಗಳು ಗಸ್ತು ಹಾಕಲಾರಂಭಿಸಿದವು. ಸ್ಥಳೀಯ ಆಡಳಿತದವರು ಯುದ್ಧ ವಿಮಾನ

ನಗರದ ಮೇಲೆ ಹಾರಾಡುತ್ತಿದೆ. ಎಲ್ಲರೂ ಎಚ್ಚರದಿಂದಿರಿ ಎಂಬ ಸೂಚನೆಯ ಕರೆ (ಸ್ಯೆರನ್)ಕೊಟ್ಟಿತು. ಆಗಷ್ಟೇ ನಿದ್ದೆಯಿಂದ ಏಳುತ್ತಿದ್ದ ಜನ ಸ್ಯೆರನ್ ಶಬ್ದವನ್ನು ಗಮನಿಸಿದರೂ ಗಮನಿಸದಂತಿದ್ದರು. ಏಕೆಂದರೆ ಅವರು ಇದನ್ನು 4-5 ವರ್ಷಗಳಿಂದ ಕೇಳುತ್ತಲೇ ಇದ್ದಾರೆ. ಕೇಳಿದರೂ ಏನೂ ಮಾಡುವಂತಿಲ್ಲ. ತಮ್ಮ ದೇಶ ಯುದ್ಧದಲ್ಲಿ ಭಾಗವಹಿಸುತ್ತಿರುವುದರಿಂದ ಅನುಭವಿಸಲೇ ಬೇಕು ಎಂದು ಸುಮ್ಮನಿದ್ದರು.

7.30 ಗಂಟೆಯ ಹೊತ್ತಿಗೆ ಆ ವಿಮಾನಗಳು ಅದೃಶ್ಯವಾದುವು. ಜನರಿಗೆ ಅಪಾಯ ತೊಲಗಿದ ಸೂಚನೆ ಕೊಡಲಾಯಿತು. ಜನ ಚುರುಕಿನಿಂದ ಓಡಾಡಲಾರಂಭಿಸಿದರು.

8.00 ಗಂಟೆಯ ಹೊತ್ತಿಗೆ ಮತ್ತೆರಡು ವಿಮಾನಗಳು ನಗರದ ಆಕಾಶದೆಡೆಗೆ ಹಾರಿಬರುತ್ತಿರುವುದನ್ನು ರಡಾರ್‌ಗಳು ಕಂಡವು. ಅದೂ ಸಹ ಹಿಂದೆ ಬಂದಂತಹ ವಿಮಾನಗಳೇ ಇರಬೇಕೆಂದು ಅಪಾಯದ ಸೂಚನೆ ನೀಡಲೇ ಇಲ್ಲ. ಆದರೆ........

8-15 ರ ಹೊತ್ತಿಗೆ ತುಂಬಾ ಎತ್ತರದಲ್ಲಿ ಹಾರಾಡುತ್ತಿದ್ದ ಅವು ಮುಖಾಮುಖಿಯಾಗಿ ಹಾರಿ ಕೆಳಗೆ ಬಂದವು. ಒಂದು ಪರಮಾಣು ಬಾಂಬೊಂದನ್ನು ಕೆಳಗೆ ಹಾಕಿತು. ಮತ್ತೊಂದು 3 ಪ್ಯಾರಾಚೂಟ್ ಗಳನ್ನು ಇಳಿಸಿತು. ಇವುಗಳಲ್ಲಿ ಬಾಂಬು ಬಿದ್ದ ನಂತರದ ಪರಿಣಾಮಗಳನ್ನು ದಾಖಲಿಸುವ ಯಂತ್ರಗಳನ್ನು ಅಳವಡಿಸಿದ್ದರು. ಮೊದಲನೆ ವಿಮಾನ ಹಾಕಿದ ಬಾಂಬು ಭೂಮಿಯಿಂದ 600 ಮೀಟರ್ ಎತ್ತರದಲ್ಲಿ ಸಿಡಿಯಿತು.

ಹೀಗೆ ಭೂಮಿಗೆ ಕಾಲಿಡುವ ಮೊದಲೇ ಸಿಡಿದ "ಪುಟ್ಟ" ಪ್ರಪಂಚ ಕಂಡ ಮೊಟ್ಟ ಮೊದಲ ವಿನಾಶಕಾರಿ ಪರಮಾಣು ಬಾಂಬಾಯಿತು. ಇದು 4000 ಕೆ.ಜಿ ತೂಕವಿದ್ದು, 3 ಮೀ X 0.7 ಮೀ ಗಾತ್ರ ಹೊಂದಿತ್ತು. ಈ ಬಾಂಬು 20,000 ಟನ್ನುಗಳ ರಾಸಾಯನಿಕ ವಸ್ತುಗಳ ಸ್ಫೋಟಕ್ಕೆ ಸಮನಾದ ಶಕ್ತಿ ಹೊಂದಿತ್ತು.

"ದೀಪಾವಳಿಯಲ್ಲಿ ಸಿಡಿಸಿದ ಪಟಾಕಿಗಳ ತರಾನಾ

ಸಾರ್.......?" ದಿನೇಶ ಕೇಳಿದ.

"ಅಂತಹ ಕೋಟಿ ಕೋಟಿ ಪಟಾಕಿಗಳ ಸಿಡಿತಕ್ಕಿಂತಲೂ ದೊಡ್ಡ ಸಿಡಿತ."

"ಅಬ್ಬಾ .... ಹೋದ ವರ್ಷ ಒಂದು ಪಟಾಕಿ ಸಿಡಿದೇ ನಮ್ಮ ಪಕ್ಕದ ಮನೆಯ ಗಣೇಶನ ಕಣ್ಣುಗಳೆರಡೂ ಹೋಗಿವೆ . ಹಾಗಾದರೆ ಈ ಬಾಂಬಿನಿಂದ ಎಷ್ಟು ಜನರಿಗೆ ಅನಾಹುತಗಳಾಗಿರಬಹುದು ?.

ಪುಟ್ಟ ಸಿಡಿದಾಗ ಸೂರ್ಯನೇ ಹಿರೋಷಿಮಾದ ಮೇಲೆ ಬಂದು ಬಿದ್ದಂತಾಗಿತ್ತು. ಉರುಳಿ ಬಿದ್ದ ಈ ಬೆಂಕಿಯ ಉಂಡೆ ಕಣ್ಣು ಮಿಟುಕಿಸುವಷ್ಟರಲ್ಲಿ 3 ಕಿ.ಮೀಗಳಷ್ಟು ಹಿಗ್ಗಿ ಈ ವ್ಯಾಪ್ತಿಯಲ್ಲಿದ್ದ ಎಲ್ಲವನ್ನೂ ನುಂಗಿಹಾಕಿತು. ಅಗಾಧವಾಗಿ ಬಿಡುಗಡೆಗೊಂಡಿದ್ದ ಶಾಖ ಸುತ್ತಲಿನ ಎಲ್ಲಾ ವಸ್ತುಗಳನ್ನೂ ಸುಟ್ಟು ಭಸ್ಮ ಮಾಡಿತು. ನಗರಕ್ಕೆ ನಗರವೇ ಹೊತ್ತಿ ಉರಿದಂತಾಯಿತು. ಸ್ಫೋಟದ ಕೇಂದ್ರದಲ್ಲಿದ್ದವರು ಕ್ಷಣದಲ್ಲಿ ಆವಿಯಾದರು. ಅವರಿದ್ದ ಸ್ಥಳ ಮಚ್ಚೆಗಳಾಗಿ ಮಾತ್ರ ಉಳಿದವು. ಸ್ಫೋಟಕೇಂದ್ರದಿಂದ 5 ಕಿ.ಮೀ ದೂರದಲ್ಲಿದ್ದವರು ತಮ್ಮ ಮೈ ಬಣ್ಣ ಕಳೆದುಕೊಂಡರು. ಸುಟ್ಟ ಚರ್ಮಗಳು ಉಬ್ಬಿ ಗುಳ್ಳೆಯೊಡೆದು ಚಿಂದಿ ಬಟ್ಟೆಗಳು ನೇತಾಡುವಂತೆ ನೇತಾಡಿತು. ಜನ ಉರಿಯಿಂದ ಓಡಿ ಕೆರೆಗಳಿಗೆ, ಬಾವಿಗಳಿಗೆ, ನದಿಗಳಿಗೆ ಬಿದ್ದರು. ಓಡುವ ತವಕದಲ್ಲಿ ಕೈ ಕಾಲು ಕಳೆದುಕೊಂಡರು. ಸ್ಫೋಟದ ಫಲವಾಗಿ ಬಿಡುಗಡೆಗೊಂಡ ಅಪಾರ ಬೆಳಕಿನಿಂದ ಕಣ್ಣುಗಳು ಕುರುಡಾದವು. ಸಹಿಸಲಾರದ ಶಬ್ದದಿಂದ ಕಿವಿಗಳ ತಮಟೆಗಳು ಒಡೆದು ಕಿವುಡರಾದರು. ಆ ಶಬ್ದದ ಕಂಪನ ತಡೆಯಲಾರದೆ ಕಟ್ಟಡಗಳೇ ಉರುಳಿದಾಗ ಕಿವಿಯ ತಮಟೆಗಳು ಉಳಿದೀತೆ? ಮೈಯ ಮಾಂಸ ಬೆಂದು ಮೂಳೆಗಳಿಂದ ಜಾರಿತು. ಕೂದಲು ಕಳೆದುಕೊಂಡು ಜಾರಿದ ಚರ್ಮ, ಮಾಂಸಗಳಿಂದ, ಬದುಕಿಗಾಗಿ ಪರದಾಡುತ್ತಿದ್ದ ಜನ ಜೀವಂತ ಬೇತಾಳಗಳಾದರು. ಜನರ ಆಕ್ರಂದನ, ಆಹಾಕಾರ ಮುಗಿಲು ಮುಟ್ಟಿತು. ಪುಟ್ಟ ಸಿಡಿದು ಕ್ಷಣಾರ್ಧದಲ್ಲಿ ಈ ಸಾವು ನೋವನ್ನು ಬಿತ್ತಿ ಹಿರೋಷಿಮಾವನ್ನು ಭೀಕರ ನರಕವನ್ನಾಗಿಸಿದ. ಪುಟ್ಟನನ್ನು ಕೆಳಕ್ಕೆಸೆದಿದ್ದ ಎನೋಲಾ ಗೇ ಎಂಬ

ವಿಮಾನದ ಚಾಲಕರಾಗಿದ್ದ ಕರ್ನಲ್‌ಟಿಬೆಟ್ಸ್ ಮತ್ತು ಕ್ಯಾಪ್ಟನ್ ರಾಬರ್ಟ್ ಎ.ಲೂಯಿಸ್ ರು ಈ ಸ್ಫೋಟ ಕಾಣುವುದಕ್ಕೆ ಮೊದಲೇ "ಓ ದೇವರೇ, ನಾವೆಂತಹ ಕೆಲಸ ಮಾಡಿದೆವಪ್ಪಾ" ಎಂದು ಉದ್ಗರಿಸಿದರು. ತಾವು ಮಾಡಿದ ತಪ್ಪಿನ ಅರಿವಾಗಿ ದೇವರಲ್ಲಿ ಮೊರೆಯಿಟ್ಟರು.

ಬುಗಿಲೆದ್ದ ಬೆಂಕಿಯಲ್ಲಿ ಎಲ್ಲ ಸುಟ್ಟು ಭಸ್ಮವಾಯಿತು. ಈ ಪ್ರದೇಶದ ಗಾಳಿ ವಿಪರೀತ ಬಿಸಿಯಾಗಿ ಮೇಲಕ್ಕೆದ್ದಿತ್ತು. ಇದರಿಂದ ಉಂಟಾದ ಖಾಲಿ ಪ್ರದೇಶಕ್ಕೆ ಸುತ್ತಲಿನ ಗಾಳಿ ಬಿರುಸಿನಿಂದ ನುಗ್ಗಿತು. ಇದು ಬಿರುಗಾಳಿಯಾಗಿ ಪರಿಣಮಿಸಿತು. ಈ ಬಿರುಗಾಳಿಯ ವೇಗ ಗಂಟೆಗೆ 500 ಕಿ.ಮೀ ಇತ್ತು. ಈ ಗಾಳಿಗೆ ಸಿಕ್ಕಿದ ಎಲ್ಲ ವಸ್ತುಗಳು ತಮ್ಮ ನೆಲೆ ಕಳೆದುಕೊಂಡು ತೇಲಾಡಿದವು. ನೆಲಸಮವಾದ ಕಟ್ಟಡದ ಅವಶೇಷಗಳು, ಇಟ್ಟಿಗೆ, ಕಲ್ಲು, ಗಾಜು ಇತ್ಯಾದಿಗಳು ಕ್ಷುದ್ರಗ್ರಹಗಳಂತೆ ಹಿರೋಶಿಮಾದ ಮೇಲೆ ಎರಗಿದವು. ಬಾಂಬಿನ ಸಿಡಿತದ ಕೇಂದ್ರ (ಬಾಂಬು ಬಿದ್ದ ಸ್ಥಳ-ಹೈಪೋ ಸೆಂಟರ್) ದಿಂದ 5 ಕಿ.ಮೀ. ವ್ಯಾಪ್ತಿಯ ಎಲ್ಲ ಕಟ್ಟಡಗಳು ನೆಲಸಮವಾಗಿದ್ದುವು. ಈ ಪ್ರದೇಶದಿಂದೆದ್ದ ಧೂಳು, ಬೆಂಕಿಯ ಕಿಡಿಗಳೊಡನೆ ಆಕಾಶದೆತ್ತರಕ್ಕೆ ಅಣಬೆಯಾಕಾರದಲ್ಲಿ ಏರಿತು. ಈ ಮೋಡ ಸುಮಾರು 50,000 ಅಡಿ ಎತ್ತರಕ್ಕೂ ಹರಡಿ ಕರಿಯ ಜಿಡ್ಡಿನ ಮಳೆಯನ್ನು ಸುರಿಸಿತು. ಸ್ಫೋಟದ ನಂತರ ಅಳಿದುಳಿದಿದ್ದವರು ಏಳಲಾರದೆ, ಎದ್ದು ನಿಲ್ಲಲಾರದೆ,




ಕಾಣಲಾರದೆ, ಕೇಳಲಾರದೆ ಪರಸ್ಪರ ಸಹಾಯಕ್ಕೆ ಮೊರೆ ಇಡುತ್ತಲೇ ಸತ್ತುಬಿದ್ದರು.

ಒಟ್ಟಾರೆಯಾಗಿ 13 ಚ.ಕಿ.ಮೀ ವಿಸ್ತೀರ್ಣದ ಪ್ರದೇಶ ಸಂಪೂರ್ಣ ನಾಶವಾಯಿತು. 3.5 ಲಕ್ಷ ಜನರಲ್ಲಿ 2 ಲಕ್ಷ ಜನ ನಿಮಿಷಾರ್ಧದಲ್ಲಿ ಸಾವಿನ ದವಡೆಗೆ ತಳ್ಳಲ್ಪಟ್ಟರು. ಈ ಸುತ್ತಳತೆಯ ಎಲ್ಲ ಆಸ್ಪತ್ರೆಗಳು, ವೈದ್ಯರುಗಳು, ನರ್ಸುಗಳು ಸತ್ತರು ಅಥವಾ ಗಾಯಗೊಂಡರು. ಹೀಗಾಗಿ ಪ್ರಾಣ ಉಳಿದವರಿಗೆ ಚಿಕಿತ್ಸೆ ಕೊಡಲೂ ಸಾಧ್ಯವಾಗಲಿಲ್ಲ. ಚಿಕಿತ್ಸೆ ಸಿಕ್ಕದೆ ಅವರೂ ಸತ್ತರು.

ಹಿರೋಶಿಮಾದ ಜನ ಸುದೀರ್ಘ ಯುದ್ಧದ ಕರಿನೆರಳಿನಲ್ಲೂ ಬದುಕನ್ನು ಹೇಗೊ ದೂಡುತ್ತಿದ್ದರು. ಆಗಸ್ಟ್ 6 ರ ಮುಂಜಾವಿನ ಕನಸುಗಳತ್ತ ಕಾಲಿಡುತ್ತಿದ್ದವರು ನಿಮಿಷಗಳಲ್ಲಿ ಆವಿಯಾಗಿದ್ದರು, ಮುಚ್ಚೆಯಾಗಿದ್ದರು, ಮಾಂಸದ ಮುದ್ದೆಯಾಗಿದ್ದರು, ರೂಪ ಬದಲಾಯಿಸಿದ ಬೇತಾಳಗಳಾಗಿದ್ದರು, ಕುಂಟ, ಕುರುಡ, ಕಿವುಡರಾಗಿದ್ದರು.

ಹಿಟ್ಲರ್‌ನ ಜರ್ಮನಿ ಯಾವ ಕನಸನ್ನು ಕಂಡು ಯುದ್ಧ ಪ್ರಾರಂಭಿಸಿತ್ತೋ, ಈಗ ಆ ಕನಸನ್ನು ಅಮೇರಿಕ ತನ್ನದಾಗಿಸಿಕೊಂಡಿತ್ತು. ತಾನು ಈ ಜಗತ್ತಿನ ಅತಿಶಕ್ತ ಎಂಬುದನ್ನು ತೋರಿಸಿಕೊಟ್ಟಿತು. ನನ್ನ ವಿರುದ್ಧ ಯಾರೂ ನಿಲ್ಲಬಾರದೆಂಬ ಬೆದರಿಕೆಯೊಡ್ಡಲು, ಜಪಾನಿನ ಮತ್ತೊಂದು ಪಟ್ಟಣ ನಾಗಸಾಕಿಯ ಮೇಲೆ ಆಗಸ್ಟ್ 9 ರಂದು ಮತ್ತೆ ಬಾಂಬ್ ಹಾಕಿತು. ಇದು 2.7 ಲಕ್ಷ ಜನ ವಾಸಿಸುತ್ತಿದ್ದ ನಾಗಸಾಕಿ ಪಟ್ಟಣವನ್ನು ಸರ್ವನಾಶ ಮಾಡಿತು. ಹೀಗೆ ಮಾಡಿ ತಾನು ತಯಾರಿಸಿದ ಬಾಂಬ್‌ಗಳು ಒಂದೇ ರೀತಿಯ ಪರಿಣಾಮವನ್ನು ನೀಡುತ್ತವೆಂಬುದನ್ನು ಖಚಿತಗೊಳಿಸಿತ್ತು. ಸಾವು, ನೋವು, ಉರಿ, ಬೆಂಕಿ, ಧೂಳು, ಮೋಡ, ಮಳೆ ಎಲ್ಲವೂ ಹಿರೋಷಿಮಾದ ಪುನರಾವರ್ತನೆಯಾಗಿತ್ತು. 3.5 ಮೀX1.5ಮೀ ಗಾತ್ರದ 4500 ಕೆ.ಜಿ ತೂಕದ 33 ಕಿಲೋಟನ್ ಸಾಮರ್ಥ್ಯದ Fatman-ಡೊಳ್ಳ ನಾಗಸಾಕಿಯ ಜನರನ್ನು ಸುಟ್ಟು ಬೂದಿಮಾಡಿತ್ತು. ಹೀಗೆ ಅಮೇರಿಕ 3 ದಿನಗಳ ಅಂತರದಲ್ಲಿ 2



ವಿನಾಶಕಾರಿ ಬಾಂಬುಗಳನ್ನುದುರಿಸಿ ಜಗತ್ತಿಗೆ ಬೆದರಿಕೆಯೊಡ್ಡಿತ್ತು.

ಆದರೆ ಮಕ್ಕಳೇ ನೀವೇ ಹೇಳಿ .... ಇದರ ಫಲಿತಾಂಶ ಮತ್ತೆ ಮುಂದೇನಾಗಿರಬಹುದು? ಬಾಂಬ್ ಬಿದ್ದ ಕೇಂದ್ರದ 3 ಕಿ.ಮೀ ಸುತ್ತಳತೆಯೊಳಗಿನ ಎಲ್ಲವೂ ಆವಿಯಾಗಿತ್ತು. 13 ಕಿ.ಮೀ ಚದರದ ಎಲ್ಲ ಕಟ್ಟಡಗಳು ನೆಲಸಮವಾಗಿದ್ದವು. ಹಿರೋಷಿಮಾದಲ್ಲಿದ್ದ ಎಲ್ಲಾ ಸಣ್ಣ ಮಕ್ಕಳೂ ಸತ್ತಿದ್ದರು. ಅಳಿದುಳಿದವರ ತಂದೆ ತಾಯಿಗಳು ಸತ್ತಿದ್ದರು. ಉಳಿದಿದ್ದವರಿಗೂ ಕೈ ಇದ್ದರೆ ಕಾಲಿಲ್ಲ, ಕಾಲಿದ್ದರೆ ಕಣ್ಣಿಲ್ಲ, ಕಣ್ಣಿದ್ದರೆ ಕಿವಿಯಿಲ್ಲ ಎಲ್ಲ ಇದ್ದ ಕೆಲವರಿಗೆ ಮೈ ಮೇಲೆ ಚರ್ಮವೇ ಇಲ್ಲ. ಗಾಯಗಳಿಗೆ ಔಷಧಿಯಿಲ್ಲ. ಸೇವಿಸಲು ಶುದ್ಧಗಾಳಿಯಿಲ್ಲ. ಆಹಾರವಿಲ್ಲ, ಕುಡಿಯಲು ನೀರಿಲ್ಲ ಹೀಗಾಗಿ ಅವರು ಬದುಕಿದ್ದರೂ ಮನುಷ್ಯರಂತೆ-ನಮ್ಮಂತೆ ಬದುಕಲು ಆಗುತ್ತಿರಲಿಲ್ಲ.

ಅವರಿಗೆ ತಂದೆ ತಾಯಿಗಳಿರಲಿಲ್ಲ.

ಅವರ ಶಾಲೆಗಳು ಪುಡಿ ಪುಡಿಯಾಗಿದ್ದವು-ಹೆಣಗಳ ರಾಶಿ ಅಲ್ಲಿ ಬಿದ್ದಿತ್ತು.

ಅವರಿಗೆ ಆಸ್ಪತ್ರೆಗಳಿರಲಿಲ್ಲ - ವೈದ್ಯರಿರಲಿಲ್ಲ, ದಾದಿಯರಿರಲಿಲ್ಲ, ಔಷಧಿಗಳಿರಲಿಲ್ಲ.

ಅವರ ಉಸಿರಾಟದ ಗಾಳಿ ವಿಷಪೂರಿತವಾಗಿತ್ತು.

ಅವರು ಕುಡಿಯುತ್ತಿದ್ದ ನೀರಿಗೆ ಅಣು ವಿಕಿರಣದ ವಿಷ ಸೇರಿತ್ತು.

ಅವರಿಗೆ ಆಹಾರವಿರಲಿಲ್ಲ-ಆಹಾರಬೆಳೆಯುವ ಭೂಮಿಗೆ,

ಬೆಳೆಗೆ ವಿಷ ಸೇರಿತ್ತು. ಈ ವಿಷದ ಗಾಳಿ, ನೀರು, ಆಹಾರ ಸೇವಿಸಿ ಅವರು ನಿತ್ಯ ರೋಗಿಗಳಾದರು. ಕ್ಯಾನ್ಸರ್, ವಿಕಿರಣ ಕಾಯಿಲೆ, ಕೊಳೆತ ಸುಟ್ಟ ಗಾಯಗಳಿಗೆ ತುತ್ತಾಗಿ ಪ್ರತಿ ನಿತ್ಯ ಸತ್ತರು. ಈ ಬಾಂಬ್ ದಾಳಿಯಿಂದ ಬದುಕುಳಿದ ರೋಗಗಳಿಗೆ ತುತ್ತಾದವರನ್ನು "ಹಿಬಾಕುಷಾ" ಎನ್ನುತ್ತಾರೆ. ಬಾಂಬ್ ದಾಳಿ ನಡೆದು 55 ವರ್ಷ



ಕಳೆದರೂ ಸುಮಾರು 4 ಲಕ್ಷ ಎರಡನೇ ತಲೆಮಾರಿನ ಹಿಬಾಕುಷಾರು ಇದ್ದಾರೆ. ಇವರು ಹುಟ್ಟುವಾಗಲೇ ಬಾಂಬಿನ ಪರಮಾಣು ವಿಕಿರಣದ ರೋಗಕ್ಕೆ ತುತ್ತಾಗಿರುತ್ತಾರೆ ಅಥವಾ ಕುಂಟೋ, ಕುರುಡೋ ಆಗಿರುತ್ತಾರೆ. ಮಾರಕ ರೋಗಗಳನ್ನು ಹೊತ್ತುಕೊಂಡೇ ಹುಟ್ಟುತ್ತಾರೆ. ರೋಗ ನಿರೋಧಕ ಶಕ್ತಿಯನ್ನೇ ಕಳಕೊಂಡು ಹುಟ್ಟಿರುತ್ತಾರೆ. ಇದು ಹಿರೋಷಿಮಾದ "ಪುಟ್ಟ" ಮತ್ತು ನಾಗಸಾಕಿಯ "ಡೊಳ್ಳ" ರ ಕ್ರೌರ್ಯದ ಕಥೆ.

ಶಿಕ್ಷಕ ಕಥೆ ಹೇಳೀ ಮುಗಿಸುತ್ತಿದ್ದಂತೆ ವಿನುತ ; "ಇಷ್ಟೆಲ್ಲಾ ನಾಶತಂದ ಪರಮಾಣು ಅಸ್ತ್ರಗಳು ಈಗಲೂ ಇದೆಯಂತಲ್ಲಾ? ಇವರಿಗೆ ಗೊತ್ತಿಲ್ಲವಾ ಇದು ಅಪಾಯವೆಂಬುದು?"

"ಹೌದು.... ಇದೆ. ಇಂತಹ ಅಪಾರ ನಾಶ ನಷ್ಟವನ್ನು ಉಂಟುಮಾಡಿದ ಪರಮಾಣು ಬಾಂಬುಗಳ ಸಂಖ್ಯೆ ಈಗ ಹೆಚ್ಚಿದೆ. ಆ ದಿನಗಳಲ್ಲಿ ಅಮೇರಿಕಾದ ಕೈಯಲ್ಲಿ ಮಾತ್ರವಿದ್ದ ಅಣ್ವಸ್ತ್ರ ಇಂದು ಕನಿಷ್ಠ 20 ರಾಷ್ಟ್ರಗಳ ಕೈಗಳಲ್ಲಿವೆ. 2 ಬಾಂಬುಗಳು ಮಾತ್ರ 4 ಲಕ್ಷ ಜನರನ್ನು ಬಲಿ ತೆಗೆದಿತ್ತು. ಆದರೆ ಇಂದು 36,000 ಅಣುಬಾಂಬುಗಳು ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿವೆ. ಹಿಂದಿನಂತೆ ವಿಮಾನದಲ್ಲಿ ಹಾರಿ ಬಂದು ಹಾಕಬೇಕಾದ ಅವಶ್ಯಕತೆ ಈಗಿಲ್ಲ. ಕುಳಿತಲ್ಲಿಂದಲೇ

ಎಷ್ಟೇ ದೂರವಿದ್ದರೂ, ಯಾವುದೇ ದಿಕ್ಕಿನಲ್ಲಿದ್ದರೂ ಸ್ವಿಚ್ ಒತ್ತಿದ ತಕ್ಷಣ ಆ ದೇಶದ ಮೇಲೆ ಬಾಂಬಿನ ಮಳೆ ಬೀಳುತ್ತದೆ. ವಿಜ್ಞಾನ ವನ್ನು ಮಾನವನ ಅಭಿವೃದ್ಧಿಗೆ ಬಳಸುವುದರ ಬದಲು ಅವನ ಅವಸಾನಕ್ಕೆ ಬಳಸುವುದು ವಿಪರ್ಯಾಸವಾಗಿದೆ. ಈಗಿರುವ ಅಣು ಬಾಂಬುಗಳಿಂದ ಪ್ರಪಂಚವನ್ನು 50 ಬಾರಿ ಸುಟ್ಟು ಬೂದಿಮಾಡಬಹುದೆಂದು ಅಂದಾಜಿಸಲಾಗಿದೆ.

ಅಂದು ಹಿರೋಷಿಮಾದ ಮೇಲೆ ಬಿದ್ದಿದ್ದ "ಪುಟ್ಟ" ಇವತ್ತಿರುವ ಜಲಜನಕದ ಬಾಂಬ್ ಮತ್ತು ನ್ಯೂಟ್ರಾನ್ ಬಾಂಬುಗಳಿಗೆ ಹೋಲಿಸಿದರೆ ಪುಟ್ಟನೇ ಆಗಿದ್ದ. ಅವನ ನೂರು ಪಟ್ಟು ಶಕ್ತಿಯಿರುವ ಬಾಂಬುಗಳನ್ನು ತಯಾರಿಸಲಾಗಿದೆ. ಬಾಂಬುಗಳನ್ನು ತಯಾರಿಸುವುದೇ ಬಹಳ ಮಹತ್ವದ ಕೆಲಸ. ತುಂಬ ಖರ್ಚಿನ ಕೆಲಸ. ಅದಕ್ಕಿಂತಲೂ ಖರ್ಚು ಅದನ್ನು ಶೇಖರಿಸಿಟ್ಟುಕೊಳ್ಳಲು ಆಗುತ್ತದೆ. ಆದರಿಂದ ವಿಕಿರಣ ಉಂಟಾಗದಂತೆ ನೋಡಿಕೊಳ್ಳಬೇಕು. ಆಕಸ್ಮಿಕವಾಗಿ ಸಿಡಿಯದಂತೆ ನೋಡಿಕೊಳ್ಳಬೇಕು. ಜೋಪಾನ ಮಾಡುವುದೇ ದೊಡ್ಡ ಜವಾಬ್ದಾರಿಯುತ ಕೆಲಸ. ಒಂದು ಪೂರ್ಣ ಪ್ರಮಾಣದ ಅಣ್ವಸ್ತ್ರ ಯೋಜನೆಗೆ ಈಗ ತಗಲುವ ಕನಿಷ್ಠ ವೆಚ್ಚ ಅಂದಾಜು 50,000 ಕೋಟಿ ರೂ.ಗಳು. ಪ್ರತಿವರ್ಷ 10,000 ಕೋಟಿ ರೂ.ಗಳು ಜೋಪಾನ ಮಾಡಲು ತಗಲುತ್ತದೆ. ಇಷ್ಟು ಹಣವನ್ನು ಸುರಿದು ನಮ್ಮಂತಹ ಬಡ ರಾಷ್ಟ್ರಗಳು ಸೆರಗಿನಲ್ಲಿ ಕೆಂಡವನ್ನು ಕಟ್ಟಿಕೊಳ್ಳಬೇಕಾಗಿದೆಯೇ ....?

1981ರ ಒಂದು ಲೆಕ್ಕಾಚಾರದ ಪ್ರಕಾರ ನ್ಯೂಕ್ಲಿಯರ್ ಬಾಂಬ್ ಒಯ್ಯುವ ಒಂದು ಖಂಡಾಂತರ ಕ್ಷಿಪಣಿಗೆ ತಗಲುವ ಖರ್ಚಿನಿಂದ 3,40,000 ಪ್ರಾ.ಶಾಲೆಗಳನ್ನು ತೆರೆಯಬಹುದು. ಅಥವಾ 68,000 ಪ್ರಾ.ಆರೋಗ್ಯ ಕೇಂದ್ರಗಳನ್ನು ತೆರೆಯಬಹುದು. ಆದರೆ ಬರಪೀಡಿತ ರಾಜ್ಯಗಳಿಗೆ ಸಹಾಯ ಕೊಡಲು 50 ಕೋಟಿ ರೂಗಳಿಗೆ ಪರದಾಡುವ ನಾವು, ಓಡಾಡಲು ಸುರಕ್ಷಿತ ರಸ್ತೆಗಳಿಲ್ಲದ ನಾವು "ಜುಟ್ಟಿಗೆ ಮಲ್ಲಿಗೆ" ಮುಡಿಯಬೇಕಾಗಿದೆಯೇ? ನಾವೂ ಅಮೇರಿಕಾದ ಸೈನಿಕರಂತೆ

ಹಿರೋಷಿಮಾಗಳ ಮೇಲೆ ಬಾಂಬೆಸೆದು ಅಯ್ಯೋ ದೇವರೇ ಎಂದು ಮೊರೆಯಿಡಬೇಕೆ? ಇದಕ್ಕಾಗಿ ನಾವು ಬಾಂಬುಗಳನ್ನು ತಯಾರಿಸಿ ಕೊಲ್ಲಲು ಸಮಯ ಕಾಯುವ ಕೊಲೆಗಾರರಾಗಬೇಕೆ? ನಾವು ಆಕ್ರಮಿಸುವ ದೇಶದ ಮಕ್ಕಳು, ಅಥವಾ ನಮ್ಮ ದೇಶದ ಮಕ್ಕಳು ಹಿರೋಶಿಮಾದ ಮಕ್ಕಳಂತೆ ಆವಿಯಾಗಬೇಕೆ? ಮಾಂಸದ ಮುದ್ದೆಯಾಗಬೇಕೆ? ನಿತ್ಯರೋಗಿಗಳಾಬೇಕೆ....? ನೀವು ಆಲೋಚಿಸಿ ಉತ್ತರ ಕಂಡುಹಿಡಿಯಿರಿ.

ವಿಜ್ಞಾನ, ವಿಜ್ಞಾನಿ, ಸಂಶೋಧನೆ ಎಂದೆಲ್ಲ ಕೇಳಲು ಎಷ್ಟು ಚೆಂದವಲ್ಲವೇ? ಹೌದು........ ಈ ಜಗತ್ತಿನಲ್ಲಿ ನಾವೀ ದಿನ ಅನುಭವಿಸುತ್ತಿರುವುದೆಲ್ಲವೂ ಒಬ್ಬೊಬ್ಬ ವಿಜ್ಞಾನಿಯ ಕೊಡುಗೆಗಳೇ. ನಮ್ಮ ಪೆನ್ನು, ಪೆನ್ಸಿಲು, ಪುಸ್ತಕ, ಬಟ್ಟೆ, ಗಡಿಯಾರ, ಔಷಧಿ, ವಿದ್ಯುತ್, ವಾಹನಗಳು, ರೇಡಿಯೋ, ಟಿ.ವಿ, ಕಂಪ್ಯೂಟರ್........ ಇತ್ಯಾದಿ. ಎಲ್ಲವೂ ವಿಜ್ಞಾನದ, ವಿಜ್ಞಾನಿಗಳ ಕೊಡುಗೆಗಳೆ. ಇವೆಲ್ಲವೂ ನಮ್ಮ ಬದುಕನ್ನು ಸುಲಭ ಮಾಡಿವೆ. ಸುಗಮ ಮಾಡಿವೆ. ಸುಖಕರ ಮಾಡಿವೆ. ಆದರೆ ಅದೇ ವಿಜ್ಞಾನ ದುರಾಶೆಯ ಹಿತಾಸಕ್ತಿಗಳ ಕೈಗೆ ಬಂದರೆ ಏನಾಗುತ್ತದೆಂದು ಯುದ್ಧಗಳು ನಮಗೆ ತೋರಿಸಿಕೊಟ್ಟಿವೆ.

ಈಗಿನ ಯುದ್ಧಗಳು ಇನ್ನೂ ಮಾರಕವಾದ ಅಸ್ತ್ರಗಳನ್ನು ಬಳಸುತ್ತಿವೆ. ಸೂಕ್ಷ್ಮಾತಿ ಸೂಕ್ಷ್ಮ ಜೀವಿಗಳಾದ ಬ್ಯಾಕ್ಟೀರಿಯಾ, ವೈರಸು, ಫಂಗೈಗಳನ್ನು ಜೈವಿಕ ಸಮರದಲ್ಲಿ ಬಳಸಲಾಗುತ್ತಿದೆ. ಹಿಂದೆಯೂ ರಾಸಾಯನಿಕ ವಸ್ತುಗಳನ್ನು ಬಳಸಿದ್ದರು. ಇದರ ಅಪಾಯ, ಬಳಸಿದವನ ಹಿಡಿತಕ್ಕೂ ಸಿಗದೆ ಇದ್ದಾಗ ಅದನ್ನು ಇನ್ನು ಮೇಲೆ ಬಳಸಬಾರದೆಂಬ ಅಂತರಾಷ್ಟ್ರೀಯ ಒಪ್ಪಂದವಾಗಿತ್ತು. 14ನೇ ಶತಮಾನದಲ್ಲಿ ಕ್ರಿಮಿಯನ್ ಯುದ್ಧದಲ್ಲಿ ಜೈವಿಕ ವಸ್ತುಗಳನ್ನು ಅಸ್ತ್ರಗಳಾಗಿ ಬಳಸಿದ್ದರು.

ಈಗ ಕನಿಷ್ಠ 50 ರಾಷ್ಟ್ರಗಳ ಕೈಯಲ್ಲಿ ಮಹಾರೋಗಗಳನ್ನು ಹರಡಿ ಮನುಷ್ಯರನ್ನು ಕೊಲ್ಲುವ ಈ ಆಯುಧಗಳು ಇವೆಯೆಂದು ಅಂದಾಜಿಸಲಾಗಿದೆ. ಯಾರು ಯಾರ ಮೇಲೆ ಯಾವಾಗ ಬಳಸುವರೋ

........? ಯಾರಿಗೂ ತಿಳಿಯದು.

ಯುದ್ಧ ಮಾನವ ಕುಲಕ್ಕೆ ಬಂದೊದಗಿದ ಶಾಪ. ಇನ್ನೊಬ್ಬನನ್ನು ಕೊಂದು ತಾನು ಬದುಕಬೇಕೆಂಬ ಹಂಬಲಕ್ಕೆ ಇತಿಯೂ ಇಲ್ಲ, ಮಿತಿಯೂ ಇಲ್ಲ. ಇದಕ್ಕಾಗಿ ಅವನು ಬಳಸದಿರುವ ವಿಧಾನಗಳೇ ಇಲ್ಲ. ಅನಾದಿ ಕಾಲದಿಂದಲೂ ಯುದ್ಧಗಳು ನಡೆಯುತ್ತಲೇ ಬಂದಿವೆ.

ಕೈಗಾರಿಕಾ ಕ್ರಾಂತಿಯಾಗುವವರೆಗಿನ ಯುದ್ಧವು ಮುಖಾಮುಖಿ ಯುದ್ಧವಾಗಿತ್ತು. ಆಗ ಬಡಿಗೆ, ಗದೆ, ಬಿಲ್ಲುಬಾಣ, ಕಲ್ಲು, ಮಚ್ಚು, ಖಡ್ಗ, ಈಟಿ, ಕವಣೆಗಳಂತಹ ಆಯುಧಗಳನ್ನು ಬಳಸುತ್ತಿದ್ದರು. ಆನೆ, ಕುದುರೆ, ಒಂಟೆಗಳು ಅಂದಿನ ವಾಹನಗಳಾಗಿದ್ದವು. ಅಂದಿನ ಯುದ್ಧಗಳಿಗೆ ಹಲವು ನಿಯಮ ನಿಬಂಧನೆಗಳನ್ನು ಹೊಡೆದಾಡಿಕೊಳ್ಳುವವರೇ ಹಾಕಿಕೊಂಡಿದ್ದರು. ಈ ಎಲ್ಲಾ ವಿವರಗಳೂ ನಮ್ಮ ರಾಮಾಯಣ, ಮಹಾಭಾರತಗಳಲ್ಲೇ ನಮಗೆ ಸಿಗುತ್ತವೆ. ರಾಮಾಯಣದಲ್ಲಿ ಶ್ರೀ ರಾಮ ರಾವಣನ ಲಂಕೆಯನ್ನು ಗೆದ್ದ ವಿವರ, ಬಳಸಿದ ಆಯುಧಗಳ ವಿವರಗಳು ಇದ್ದರೆ ಮಹಾಭಾರತದಲ್ಲಿ ಪಾಂಡವ ಕೌರವರ ಯುದ್ಧದ ತಂತ್ರಗಳು, ಆಯುಧಗಳು, ನಿಯಮಗಳು ಸವಿವರವಾಗಿ ಸಿಗುತ್ತದೆ. ಸಮಯ ಮಾಡಿ ಇವೆರಡನ್ನೂ ಓದಿ ವಿಷಯ ಸಂಗ್ರಹಿಸಿಕೊಳ್ಳಿ. ಭಗವದ್ಗೀತೆ ಧರ್ಮ ಪಾಲನೆಗಾಗಿ ಶಸ್ತ್ರಧಾರಿಯಾಗು, ಯುದ್ಧ ಮಾಡು, ಅದು ನಿನ್ನ ಕರ್ತವ್ಯ ಎಂದು ಹೇಳಿವೆ. ಜಗತ್ತಿನ ಹಲವಾರು ಗ್ರಂಥಗಳು ಇಂತಹ ಯುದ್ಧಗಳ ಕಥೆಗಳನ್ನು ವಿವರಿಸಿವೆ.

ಕೈಗಾರಿಕಾ ಕ್ರಾಂತಿಯ ಅವಧಿಯಲ್ಲಿ ನಡೆದ ಯುದ್ಧಗಳನ್ನು ರಾಸಾಯನಿಕ ಯುದ್ಧಗಳೆಂದು ಕರೆಯಬಹುದು. ಈ ಯುದ್ಧಗಳಲ್ಲಿ



ರಾಸಾಯನಿಕ ವಸ್ತುಗಳನ್ನು ಆಯುಧಗಳಾಗಿ ಬಳಕೆ ಮಾಡಿದ್ದರು. ಕ್ಲೋರಿನ್, ಸಾಸಿವೆ ಅನಿಲಗಳಂತಹ ಅನಿಲಗಳು, ಕರಿಮದ್ದು, ಕೊನೆಗೆ ಪರಮಾಣುಗಳನ್ನು ಬಳಸಲಾಯ್ತು.

ಇನ್ನೀಗ ಬರುತ್ತಿದೆ ಜೈವಿಕ ಯುದ್ಧ. ಇಲ್ಲಿ ರಾಸಾಯನಿಕ ಯುದ್ಧದ ಅವಧಿಯ ಬಾಂಬು, ಬೆಂಕಿ, ಸ್ಫೋಟ, ಬಿರುಗಾಳಿ ಏನೂ ಬೇಕಿಲ್ಲ. ಯಾರಿಗೂ ಗೊತ್ತಿಲ್ಲದೆ ಗಾಳಿಗೆ ತೂರಿದ ವಿಷ ಜೀವಿಗಳು ಮನುಷ್ಯನನ್ನು ಮಾರಕ ರೋಗಗಳಿಗೊಡ್ಡಿ ಪ್ರಾಣ ತೆಗೆಯುತ್ತವೆ. ಯಾವ ದೇಶವನ್ನು ಮಣಿಸಬೇಕೋ ಆ ದೇಶದ ಸಮಸ್ತ ಅಭಿವೃದ್ಧಿಯನ್ನೂ ನಿಶ್ಯಬ್ಧವಾಗಿ ತಡೆಗಟ್ಟಿ ನೆಲಸಮ ಮಾಡುತ್ತದೆ.

ಈ ಯುದ್ಧಗಳು ಬೇಕೇ?

ಮಕ್ಕಳಿಗೆ ತಂದೆ ತಾಯಿಗಳು ಇಲ್ಲದೆ ಮಾಡುವ......
ನೀರಿಲ್ಲದೆ ಮಾಡುವ......
ಗಾಳಿಯಿಲ್ಲದೆ ಮಾಡುವ......
ಆಹಾರವಿಲ್ಲದೆ ಮಾಡುವ......
ಆರೋಗ್ಯವಿಲ್ಲದೆ ಮಾಡುವ......
ಮನುಷ್ಯನನ್ನು ಊನನನ್ನಾಗಿಸುವ......
ಮಾನವಕುಲಕ್ಕೆ ಬೆಂಕಿ ಬೀಳಿಸುವ......
ಈ ಯುದ್ಧಗಳೂ ಬೇಕೇ?
ರಾಸಾಯನಿಕ ಅಸ್ತ್ರಗಳು ಬೇಕೇ?
ಅಣುಬಾಂಬುಗಳು ಬೇಕೇ?
ನಾವೂ, ನೀವೂ ಹಿರೋಷಿಮಾದ ಮಕ್ಕಳಾಗಬೇಕೇ?
ಮಕ್ಕಳೇ, ಯುದ್ಧದಿಂದ ಯಾರಾದರೂ ಗೆಲ್ಲಲು ಸಾಧ್ಯವೇ?

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವಿರಾ? ....

ಹಿರೋಶಿಮಾ ಬಾಂಬ್ ದಾಳಿಗೆ ತುತ್ತಾದವರ ಅನುಭವ

ಹಿರೋಶಿಮಾ ನಗರವು ಇದ್ದಕ್ಕಿದ್ದಂತೆ ಮಂಗಮಾಯ ವಾದಂತೆ ನನಗೆ ಭಾಸವಾಯಿತು(ಅಕಿರೋ ತಖಾಷಿ, 14 ವಯಸ್ಸಿನ ಬಾಲಕ, ಆಗಸ್ಟ್ 6. 1945 ರಲ್ಲಿ ಹಿರೋಷಿಮಾದ ಮೇಲೆ ಬಾಂಬು ದಾಳಿ ನಡೆದಾಗ).

*****

ಅಪಘಾತದಿಂದ ನನ್ನನ್ನು ರಕ್ಷಿಸಲ್ಪಟ್ಟಾಗ ನನ್ನ ಕೂದಲು ಸುಟ್ಟು ಹೋಗಿತ್ತು. ನನ್ನ ಮುಖ ಬೆಲೂನಿನಂತೆ ಊದಿಕೊಂಡಿತ್ತು. ನನಗೆ ನನ್ನ ಶರ್ಟ್ ಸುಟ್ಟು ನನ್ನ ತೋಳಿನ ಬಳಿ ನೇತಾಡುತ್ತಿರು ವಂತೆ ಭಾಸವಾಯಿತು. ಆದರೆ ಅದು ನನ್ನ ಶರ್ಟ್ ಆಗಿರದೆ, ನನ್ನದೇ ಚರ್ಮವೆಂದು ನಂತರ ತಿಳಿಯಿತು. ಅದು ನಿಜವಾಗಿಯೂ ನರಕವಾಗಿತ್ತು (ಹಿರೋಷಿಮಾದ ಮೇಲೆ ಬಾಂಬು ಧಾಳಿಯಾದಾಗ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ ಮಿಚಿಕೊಯ ಮಾಕಾ).

*****

ನನ್ನ ಪ್ರೀತಿಪಾತ್ರರ ದೇಹಗಳನ್ನು ಹುಡುಕುವುದಾದರೂ ಹೇಗೆ? ನಾನು ತರಗತಿಯ ಕೊಠಡಿಗಳನ್ನು ಹಾದು ಹೋಗುವಾಗ ನನ್ನ ಪ್ರೀತಿಪಾತ್ರ ಜನರಿಗಾಗಿ ದೃಷ್ಟಿ ಹರಿಸಿದರೆ ಅಲ್ಲಿ ಕಂಡದ್ದೇನು? ಅವರೆಲ್ಲಾ ಗುಡ್ಡೆಗಳಾಗಿ ಬಿದ್ದಿದ್ದರು. ಅವರನ್ನು ಹುಡುಕಬೇಕೆಂದರೆ ನಾನು ಒಂದೊಂದು ದೇಹವನ್ನೂ ಎಳೆದು ನೋಡಬೇಕಾಗಿತ್ತು. ಆ ಗುಡ್ಡೆಯಲ್ಲಿ ಎಲ್ಲ ತರಹದ ದೇಹಗಳೂ ದೊರೆಯುತ್ತಿದ್ದವು. ಬರೀ ಮನುಷ್ಯ ದೇಹಗಳಲ್ಲ; ಪಶು ಪಕ್ಷಿಗಳ, ಬೆಕ್ಕು ನಾಯಿಗಳ ಮತ್ತು ಒಂದು ಹಸುವಿನ ದೇಹವೂ ಇದರಲ್ಲಿ ಸೇರಿತ್ತು. ಅದು ನೋಡಲು ಭಯಾನಕವಾಗಿತ್ತು. ಅದನ್ನು ವರ್ಣಿಸಲು ಶಬ್ದಗಳೇ ಬರುತ್ತಿಲ್ಲ. ಅವೆಲ್ಲಾ ಬೆಂದ ದೇಹಗಳು; ಕೆಲವಂತೂ ಅರ್ಧ ಸುಟ್ಟವೂ ಇದ್ದವು. ಅಲ್ಲಿ ಶಾಖಕ್ಕೆ ಊದಿಕೊಂಡ ಕುದುರೆಯೂ ಇತ್ತು. ಅಲ್ಲಿ ಎಲ್ಲವೂ ಇದ್ದವು........ ಎಲ್ಲವೂ ಇದ್ದವು.

ಒಂದು ತಿಂಗಳ ನಂತರ ನನ್ನ ಅಣ್ಣ ನನ್ನನ್ನು ಮತ್ತು ಉಳಿದ ಕುಟುಂಬದ ಸದಸ್ಯರನ್ನು ಒಟ್ಟಾಗಿ ಕರೆದು ಮೇಜಿನ ಮೇಲೊಂದು ವಸ್ತುವನ್ನು ಇಟ್ಟ. ಬಟ್ಟೆಯಲ್ಲಿ ಸುತ್ತಿತ್ತು. ಅಣ್ಣ ಹೇಳಿದ, ತೋಷಿಕೊ, ನಿನ್ನ ತಾಯಿಯನ್ನು ತೆಗೆದು ನೋಡು. ಪ್ರತಿದಿನ ಅವಳಿಗಾಗಿ ಹುಡುಕುತ್ತಿದ್ದೆಯಲ್ಲಾ. ನಾನು ಅವನು ಹೇಳಿದಂತೆಯೇ ಮಾಡಿದೆ. ಬಟ್ಟೆಯ ಪೊಟ್ಟಣವನ್ನು ಬಿಚ್ಚಿದೆ. ಅದರಲ್ಲಿ ನನ್ನ ತಾಯಿಯ ಸುಟ್ಟ ಮೂಳೆಗಳಿರಬಹುದೆಂದುಕೊಂಡೆ. ಆದರೆ ಅದು ನನ್ನ ತಾಯಿಯ ಸುಟ್ಟ ತಲೆಯಾಗಿತ್ತು. ಕಣ್ಣುಗಳಿರಲಿಲ್ಲ. ಒಂದು ಹಲ್ಲೂ ಇರಲಿಲ್ಲ. ಮಾಂಸದ ಒಂದು ಸಣ್ಣ ತುಂಡು, ಹಿಂದೆ ಕೆಲವು ಕೂದಲುಗಳು. ಅದರಲ್ಲಿ ಅವಳ ಕನ್ನಡಕವೂ ಇತ್ತು. ಹಿರೋಷಿಮಾದಲ್ಲಿರುವ ಶಾಂತಿ ಸ್ಮಾರಕ ವಸ್ತು ಸಂಗ್ರಹಾಲಯದಲ್ಲಿ ಈ ಕನ್ನಡಕವನ್ನು ಈಗ ಪ್ರದರ್ಶಿಸಲಾಗಿದೆ. ಜನತೆಗೆ ಈ ಘಟನೆಯ ಪರಿಣಾಮವನ್ನು ತೋರಿಸುವ ಉದ್ದೇಶದಿಂದ ಇಲ್ಲಿ ಇಡಲಾಗಿದೆ (ತೋಷಿಕೊ ಸೈಕಿ, ಬಾಂಬ್ ದಾಳಿ ನಡೆದಾಗ ಅವಳಿಗೆ 26 ವರ್ಷಗಳಾಗಿದ್ದವು. ಈ ಬಾಂಬ್ ಸ್ಫೋಟದಲ್ಲಿ ಅವಳ ಕುಟುಂಬದ ಹದಿಮೂರು ಸದಸ್ಯರನ್ನು ಕಳೆದುಕೊಂಡಿದ್ದಳು.)

*****

ಬೆಟ್ಟದ ಮೇಲಿನಿಂದ ಕೆಳಗೆ ದೃಷ್ಟಿ ಹರಿಸಿದಾಗ, ಇಡೀ ನಗರವೇ ಸರ್ವನಾಶವಾಗಿತ್ತು. ಹಳದಿ ಬಣ್ಣದ ಮರಳಿನಂತೆ ಕಾಣುತ್ತಿತ್ತು. ಅದು ಪೂರ್ತಿ ಹಳದಿಯಾಗಿ, ಹಳದಿ ಬಣ್ಣದ ಮರುಭೂಮಿಯಂತೆ ಕಾಣುತ್ತಿತ್ತು (ಇಸಾವೋ ಕಿಟಾ, ಹಿರೋಷಿಮಾ ಜಿಲ್ಲಾ ಹವಾಮಾನ ಬ್ಯೂರೋನಲ್ಲಿ ಕೆಲಸ ಮಾಡುತ್ತಿರುವಾಕೆ, ಬಾಂಬ್ ದಾಳಿಯ ಸಂದರ್ಭದಲ್ಲಿ 33 ವರ್ಷ ವಯಸ್ಸಿನವಳಾಗಿದ್ದಳು).

*****

ಈ ಎರಡೂ ಬಾಂಬ್ ಸ್ಫೋಟದ ದೀರ್ಘಕಾಲದ ಪರಿಣಾಮಗಳ ತೀವ್ರತೆಯನ್ನು ಸಂಪೂರ್ಣವಾಗಿ ಅಳೆಯುವುದು

ಕಷ್ಟ. ಆದರೂ ಅದರ ಅನುಭವವನ್ನು ಮತ್ತೆ ನೆನಪಿಸಿಕೊಳ್ಳಲು ಇನ್ನೊಂದೆರಡು ಹಿರೋಷಿಮದ ಭಗ್ನಾವಶೇಷಗಳ ನಿದರ್ಶನಗಳನ್ನು ನೋಡೋಣ.

ನಾನು ಈಗಲೂ ಕ್ರಮವಾಗಿ ಒಬ್ಬ ಕಿವಿ ವೈದ್ಯ, ನೇತ್ರ ವೈದ್ಯ ಮತ್ತು ಚರ್ಮ ವೈದ್ಯ ಹಾಗೂ ಶಸ್ತ್ರ ಚಿಕಿತ್ಸಾ ತಜ್ಞನನ್ನು ನೋಡಲೇಬೇಕಾಗಿದೆ. ನನ್ನ ಎರಡೂ ಕೈಗಳಲ್ಲಿ ಗೆಡ್ಡೆಗಳಾಗಿವೆ. ನನ್ನ ಬಲಗೈಯಲ್ಲಿ ಉಂಟಾಗಿರುವ ಗಾಯವಂತೂ ಅತ್ಯಂತ ಗಂಭೀರ ಸ್ವರೂಪದ್ದು. ಯಾವಾಗಲೂ ನನಗೆ ಬಲಭಾಗದಲ್ಲಿ ಭಯಂಕರ ಗೆಡ್ಡೆಗಳಾಗುತ್ತಿರುತ್ತವೆ. 1954 ರಲ್ಲಿ ಶಸ್ತ್ರಚಿಕಿತ್ಸೆ ಮಾಡಿ ಈ ಗೆಡ್ಡೆಯನ್ನು ತೆಗೆಸಿಕೊಂಡೆ. ನನ್ನ ಮೊಣಕೈ 120 ಡಿಗ್ರಿಯತ್ತ ಚಲಿಸುವುದೇ ಇಲ್ಲ. ಮೂಳೆಗಳು ಮತ್ತು ಮಾಂಸಖಂಡಗಳು ಒಂದಕ್ಕೊಂದು ಅಂಟಿಕೊಂಡುವೆ (ಕುಮಾರಿ ಅಖಿರೋ ತಕಾಶಿ, ಮೇಲಿನ ಮೊದಲ ಹೇಳಿಕೆಯಲ್ಲಿ).

*****

ಜಪಾನಿ ಇಸ್ಲಾಮಿಕ್ ವಿದಿಷಿ ಮರಿಕೊ ಕಿಟಾನೊ, ನಾಗಸಾಕಿಯ ಬಾಂಬ್‌ಸ್ಫೋಟದಲ್ಲಿ ಬದುಕುಳಿದವಳು, ಪಾಕಿಸ್ತಾನಿ ಪತ್ರಿಕೆಯೊಂದಕ್ಕೆ ಕೋಪದಿಂದ ಪತ್ರವೊಂದನ್ನು ಬರೆದಳು (ಇದರ ಪೂರ್ಣ ಪಠ್ಯವನ್ನು ವೆಬ್‌ಸೈಟ್‌ನಲ್ಲಿ www.mnet.fr/aiindex/NoNukes.html ನೋಡಬಹುದು). ದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಅಣು ಪರೀಕ್ಷೆಗಳ ನಂತರ ನಡೆದ ವಿಜಯೋತ್ಸವ ಸಮಾರಂಭಗಳನ್ನು ದೂರದರ್ಶನದಲ್ಲಿ ವೀಕ್ಷಿಸಿದ ನಂತರ ಉದ್ರಿಕ್ತಳಾದ ಈಕೆ ತಾನು ಜೀವನದಲ್ಲಿ ಅನುಭವಿಸಿದ ಭಯಾನಕ ಪರಿಣಾಮಗಳನ್ನು ವಿವರಿಸಿದ್ದಾಳೆ: ಊನಗೊಂಡ ಪಾದ, ದೃಷ್ಟಿಯಿಲ್ಲದ ಒಂದು ಕಣ್ಣು, ಪಕ್ಕದಲ್ಲಿ ಸುಮ್ಮನೆ ಜೋತು ಬಿದ್ದಿರುವ ಎಡಕೈಯೆಲ್ಲವೂ ಭಯಾನಕ ನರಕವನ್ನು ನೆನಪಿಗೆ ತರುತ್ತದೆ. ವಿಜಯೋತ್ಸವದ ಸಂಭ್ರಮದಲ್ಲಿದ್ದ ಮುಖಗಳನ್ನು

ದೂರದರ್ಶನದಲ್ಲಿ ನೋಡಿದಾಗ ಅನಿಸಿದ್ದು. ನಾಚಿಕೆಯಿಲ್ಲದ ಅಜ್ಞಾನ ಆವರಿಸಿರುವ ಮುಖಗಳು. ಅಣ್ವಸ್ತ್ರಗಳ ದುಷ್ಪರಿಣಾಮ ನೋಡಿ ಅನುಭವವಿಲ್ಲದಿದ್ದರೂ ಅಂತಹ ಯೋಚನೆಯನ್ನೂ ಮಾಡಿರದಂಥ ಮುಖಗಳು.

ಹಿರೋಷಿಮಾದ ಮೇಲೆ ಬಾಂಬ್ ಹಾಕಿದಾಗ ಸದಾಕೋ 12 ವರ್ಷದ ಹುಡುಗಿ. ಈ ಬಾಂಬ್ ದಾಳಿಯಲ್ಲಿ ಬದುಕುಳಿದ ನತದೃಷ್ಟೆ. ನಂತರದ ವಿಕಿರಣದ ಪರಿಣಾಮವಾಗಿ ಕ್ಯಾನ್ಸರ್‌ಗೆ ಬಲಿಯಾದಳು. ಜಪಾನ್‌ನಲ್ಲಿರುವ ನಂಬಿಕೆಯಂತೆ ದಿನಕೊಂದು ಕೊಕ್ಕರೆಯಂತೆ ಒಟ್ಟು ಒಂದು ಸಾವಿರ ಕಾಗದದ ಕೊಕ್ಕರೆಗಳನ್ನು ಮಾಡಿ ತೇಲಿ ಬಿಟ್ಟರೆ ಗುಣವಾಗುವುದಾಗಿ ಅವಳಿಗೆ ಹೇಳಿದರು. ಅದರಂತೆ ಅವಳು ದಿನಕ್ಕೊಂದರಂತೆ ಒಟ್ಟು 999 ಕೊಕ್ಕರೆಗಳನ್ನು ಮಾಡಿ ತೇಲಿಬಿಟ್ಟಳು. ಹಾಗೂ ಸತ್ತು ಹೋದಳು. ಅವಳ ಗೆಳತಿಯರೆಲ್ಲ ಸೇರಿ 1000 ಕೊಕ್ಕರೆಗಳನ್ನು ಮಾಡಿ ಅವಳ ಶವ ಪೆಟ್ಟಿಗೆಯಲ್ಲಿಟ್ಟು ಅವಳ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿದರು.

	ಹಿರೋಷಿಮಾ	ನಾಗಾಸಾಕಿ
ಹಾನಿಗೊಳಗಾದವರ ಸಂಖ್ಯೆ	1,36,000	64,000
ಮೊದಲ ದಿನ ಸತ್ತವರು	45,000	22,000
ಮೊದಲ ದಿನದ ಬಳಿಕ ಸತ್ತವರು	19,000	17,000
ಮೊದಲ ನಾಲ್ಕು ತಿಂಗಳಲ್ಲಿ ಸತ್ತವರು	64,000	39,000
ಮೊದಲ ದಿನ ಗಾಯಗೊಂಡು ಬದುಕಿದವರು	91,000	42,000
ಉಳಿದುಕೊಂಡ ಗಾಯಾಳುಗಳು	72,000	25,000

2001 ರ ಮಕ್ಕಳ ಶಾಂತಿ ಸಮಾವೇಶದ ಗೊತ್ತುವಳಿ

1945 ರ ಈ ದಿನದಲ್ಲಿ ಬಿದ್ದ ಬಾಂಬಿನಿಂದುಂಟಾದ ಬೆಂಕಿಯ ಕೆನ್ನಾಲಿಗೆ ಮತ್ತು ಕರ್ಕಶ ಶಬ್ದ ಮಕ್ಕಳ ಮುಖದ ಕಿರುನಗು ಮತ್ತು ಸಂತಸವನ್ನು ಹಾಳುಗೆಡುವಿತು. ಈ ಅನಾಹುತದಲ್ಲಿ ಸಿಕ್ಕಿಕೊಂಡ ಜನ ಕಂಕುಳಲ್ಲಿ ಮಕ್ಕಳನ್ನೆತ್ತಿಕೊಂಡು ಓಡುತ್ತಿದ್ದ ತಾಯಂದಿರನ್ನು ಮರೆತರು. ನೆರವಿಗಾಗಿ ಮೊರೆಯಿಡುತ್ತಲೇ ಅನೇಕರು ಸಾವನ್ನಪ್ಪಿದರು.

ಅರ್ಧ ಶತಮಾನದ ನಂತರ ತನ್ನೆಲ್ಲಾ ನೋವುಗಳಿಂದ ಹೊರಬಂದು, ಹಿರೋಷಿಮಾ ತನ್ನ ಸೌಂದರ್ಯವನ್ನು ಮತ್ತೆ ಗಳಿಸಿದೆ. ಹಿರೋಷಿಮಾದ ಕಹಿ ನೆನಪನ್ನು ಬಲ್ಲ ನಾವು ಶಾಂತಿಯುತ ವಿಶ್ವದ ಸ್ಥಾಪನೆಗಾಗಿ ಏನು ಮಾಡಬೇಕೆಂದು ಕಲಿಯಬೇಕಿದೆ. ಶಾಂತಿಗಾಗಿ ಪ್ರಾರ್ಥಿಸುತ್ತ ಒಂದೊಂದೆ ಕೊಕ್ಕರೆಯನ್ನು ಮಾಡಿದ ಸದಾಕೋಳಂತೆ ನಾವೂ ಕೂಡ ನಿರಂತರವಾಗಿ ಶ್ರಮಿಸುತ್ತ ನಮ್ಮ ಒಂದೊಂದೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಿದೆ.

ನಂಬಿಕೆ ಹಾಗೂ ಪರಸ್ಪರ ತಿಳುವಳಿಕೆಯ ಗಟ್ಟಿಯಾದ ದಾರದಿಂದ ನಮ್ಮ ಸುತ್ತ ಪುಟ್ಟ ಪ್ರೀತಿಯ ವಿಶ್ವವನ್ನು ಸೃಷ್ಟಿಸಬೇಕಿದೆ. ಇಂತಹ ಬಂಧನವನ್ನು ವಿಶ್ವದೆಲ್ಲೆಡೆ ಬೆಳಸಬೇಕಿದೆ. ಯುವುದೇ ತಪ್ಪೆಸಗದಂತೆ ಈ ಪ್ರೀತಿಯ ಬಾಂಧವ್ಯ ಬೆಳಸುವುದು ಹಿರೋಷಿಮಾದ ಮಕ್ಕಳಾಗಿ ನಮ್ಮ ಕರ್ತವ್ಯವಾಗಿದೆ.

ಈ ಸುಂದರ ಭೂಮಿಯನ್ನು ರಕ್ಷಿಸಲು ಅಣ್ವಸ್ತ್ರದ ಅಪಾಯಗಳನ್ನು ಆಳವಾಗಿ ಅಧ್ಯಯನ ಮಾಡಬೇಕಿದೆ. ಹಿರೋಷಿಮಾದಂತಹ ಕಥೆಗಳನ್ನು ಇತರರಿಗೆ ಹೇಳಲು ನಾವು ಕಲಿಯುತ್ತೇವೆ. ಇವೆಲ್ಲಕ್ಕಿಂತ ಮುಖ್ಯವಾಗಿ ಪ್ರಪಂಚದಾದ್ಯಂತ ಶಾಂತಿಯ ಸಂದೇಶವನ್ನು ಸಾರಲು, 21 ನೇ ಶತಮಾನವನ್ನು ಶಾಂತಿಯ ಶತಮಾನವನ್ನಾಗಿ ಮಾಡಲು ಶ್ರಮಿಸುವುದಾಗಿ ನಾವು ಪ್ರತಿಜ್ಞೆ ಮಾಡುತ್ತೇವೆ.

ಆಕರಗಳು : ಅಣ್ವಸ್ತ್ರೀಕರಣ ಮತ್ತು ನೀವು: ಅ.ವಿ.ವೇ. ಬೆಂಗಳೂರು

: ಹಿರೋಶಿಮದಿಂದ ಬುದ್ದನ ನಗುವಿನವರೆಗೆ – ಸಿ.ಯತಿರಾಜು

: ಜ್ಞಾನ ವಿಜ್ಞಾನಕೋಶ–4 : ನವಕರ್ನಾಟಕ

ಭಾರತ ಜ್ಞಾನ ವಿಜ್ಞಾನ ಸಮಿತಿಯ ಉದ್ದೇಶಗಳು

೧. ಸಂಪೂರ್ಣಸಾಕ್ಷರತೆ, ಸಾಕ್ಷರೋತ್ತರ ಕಾರ್ಯಕ್ರಮ ಹಾಗೂ ಮುಂದುವರಿಕೆ ಶಿಕ್ಷಣಕ್ಕೆ ಜನ ಬೆಂಬಲ ಒದಗಿಸಿ ಯಶಸ್ವಿ ಮಾಡುವುದು. ಕೆಲವು ಆಯ್ದ ಪ್ರದೇಶಗಳಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ತೆಗೆದುಕೊಂಡು ನಡೆಸುವುದು.

೨. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಸಂತಸ ಕಲಿಕೆಯ ಚಿಣ್ಣರ ಮೇಳಗಳು ಹಾಗೂ ಇತರ ಪೂರಕ ಕಾರ್ಯಕ್ರಮಗಳನ್ನು ಸಂಘಟಿಸುವುದು, ಶಿಕ್ಷಕರ ತರಬೇತಿ ಹಮ್ಮಿಕೊಳ್ಳುವುದು.

೩. ಮಹಿಳಾ ಸಮಾನತೆಗೆ ಪೂರಕವಾದ ಸಮತಾ ವಿಜ್ಞಾನ ಮೇಳಗಳನ್ನು ಸಂಘಟಿಸುವುದು ಹಾಗೂ ಸ್ವಸಹಾಯ ಸಂಘಗಳನ್ನು ರಚಿಸಿ ನಡೆಸುವುದು.

೪. ಮೂಢನಂಬಿಕೆ ವಿರೋಧಿಸುವ ಹಾಗೂ ವೈಜ್ಞಾನಿಕ ಮನೋಭಾವನೆ ಬೆಳೆಸುವ ಕಾರ್ಯಕ್ರಮ/ಕಾರ್ಯಾಗಾರ ಹಾಗೂ ಜಾಥಾಗಳನ್ನು ಹಮ್ಮಿಕೊಳ್ಳುವುದು.

೫. ಕಡಿಮೆ ಬೆಲೆಯಲ್ಲಿ ಶಿಕ್ಷಣ, ವಿಜ್ಞಾನ ಹಾಗೂ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿ ಮಾರಾಟ ಮಾಡುವುದು. ಜನಸಾಮಾನ್ಯರಲ್ಲಿ ಓದುವ ಹವ್ಯಾಸ ಬೆಳೆಸುವುದು.

೬. ಜಿಲ್ಲಾ, ತಾಲೂಕು, ಹಾಗೂ ಸ್ಥಳೀಯ ಮಟ್ಟದಲ್ಲಿ ಸದಸ್ಯರನ್ನು ನೊಂದಾಯಿಸಿ ಜ್ಞಾನ ವಿಜ್ಞಾನ ಕೇಂದ್ರಗಳನ್ನು ಆರಂಭಿಸುವುದು.

೭. ಜನಪರ ವಿಜ್ಞಾನ ಹಾಗೂ ತಂತ್ರಜ್ಞಾನ ಯೋಜನೆಗಳಿಗಾಗಿ ಒತ್ತಾಯಿಸುವುದು.

೮. ರಜಾ ದಿನಗಳಲ್ಲಿ ಮಕ್ಕಳಿಗಾಗಿ ವಿಜ್ಞಾನ ಶಿಬಿರಗಳನ್ನು ಏರ್ಪಡಿಸುವುದು.

೯. ಗ್ರಾಮೀಣಾಭಿವೃದ್ಧಿಯ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು.



ನಾನು ಭಾರತದ ಭವಿಷ್ಯವನ್ನು ನೋಡುವಾ
ನಕ್ಷತ್ರ, ಗ್ರಹಗಳನ್ನು ನೋಡುವುದಿಲ
ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇನೆ
ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಉಲ್ಲಾಸವಿದ್ದ
ನಮ್ಮದೇಶದ ಭವಿಷ್ಯ ಉಜ್ವಲವಾಗಿರುತ್ತದೆ
ಆ ಕಣ್ಣುಗಳಲ್ಲಿ ಕಣ್ಣೀರು, ನಿರಾಸೆ ತುಂಬಿದ್ದ
ಭಾರತಕ್ಕೆ ಭವಿಷ್ಯವಿರುವುದಿಲ್ಲ

